ಅಪರಂಜಿ

ಫೆಬ್ರವರಿ 2007

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವು

ಬಾಗೂರು ಚಂದ್ರು

ಡಾ॥ ಎಚ್.ಕೆ. ನಂಜುಂಡಸ್ವಾಮಿ

ಧೃತಿ

ದಂನಆ

ನಾಚಿ

ಚಿತ್ರ ರಾಮಚಂದ್ರನ್


ನಾಗಶ್ರೀ ಸೂರಿ

ಕು.ಕ.

ಎನ್. ರಾಮನಾಥ್

ಗೋಪಾಲಿ

ಡಿ ಪ್ರತಿ: ರೂ. 10.00



ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್



ಈ ಸಂಚಿಕೆಯಲ್ಲಿ.....

ಸಂಪುಟ 24 ಸಂಚಿಕೆ - 5
ಫೆಬ್ರವರಿ- 2007

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080- 23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. email: brmurthy@dataone.in



೦ ಪ್ರಕಾಶ್

ಹೊಸಪೇಟೆ ಹತ್ತಿರ ಭಯ್ಯಾ ಅಂದರೆ ಭಯ ಆಗುತ್ತೆ ಈಗ!!

★★★

ಸಂಪುಟದಿಂದ ತೆಗೆಯೋದಾದ್ರೆ ತೆಗೆಯಲಿ

- ಮಾನ್ಯ ಮಂತ್ರಿಗಳು

ಅವರನ್ನ Rave ಅಣ್ಣ ಅಂತ ಕರೆಯಬಾರದು!

★★★

ರಾಷ್ಟ್ರೀಯ ನಾಟಕ ಶಾಲೆ; ಹೋರಾಟ ನಿಲ್ಲದು

- ಸುದ್ದಿ

ಅದೂ 'ನಾಟಕ' ಆಗದಿರಲಿ!!

★★★

ಸದ್ದಾಂ ಗಿಂತ ಬುಷ್ ಅಪಾಯಕಾರಿ

- ಹೇಳಿಕೆ

ಹಾಗೇ ಕಾಣುತ್ತೆ!!

★★★

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನಕ್ಕೆ ಚಾಲನೆ

- ಶೀರ್ಷಿಕೆ

ಇದಕ್ಕೆ 'ಕಿಲೋ ಗ್ರಾಮೀಣ' ಬೇಕಾಗುತ್ತೆ!!

★★★

ಸೋನಿಯಾಗೇ ಮಾಹಿತಿ ಒಪ್ಪಿಸಿದ ಬೇಗ್

- ಸುದ್ದಿ

ಅದನ್ನೆಲ್ಲ 'ಬೇಗ' ಒಪ್ಪಿಸಿದರಂತೆ!!

★★★

ವೃದ್ಧಾಪ್ಯ ಮರೆವು ರೋಗ ಹೆಚ್ಚಳ

- ತಜ್ಞರು

ನಮಗೂ ಬಾಲ್ಯವೆಲ್ಲ ಮರೆತೇ ಹೋಗಿದೆ!!

★★★

ಶಾಸಕರ ಉಚ್ಚಾಟನೆ ಸಿಂಧು

- ಸುಪ್ರೀಂ ಕೋರ್ಟ್

ಭಾರತ ಮಾತೆ ನಾಚಿ ತಲೆ ತಗ್ಗಿಸಿದಳಂತೆ!!

★★★

ಧನ್ಯವಾದಗಳು

ನಮ್ಮ ಮನವಿಯನ್ನು ಪುರಸ್ಕರಿಸಿ ಈ ಕೆಳಕಂಡ ಮಹನೀಯರು ಟ್ರಸ್ಟ್‌ಗೆ ದೇಣಿಗೆಯಾಗಿ ರೂ. 10,000/- ಕಳಿಸಿದ್ದಾರೆ. ಅವರಿಗೆ ಧನ್ಯವಾಗಳು.

ಶ್ರೀ ಎಸ್.ಜಿ. ಕೇಶವಮೂರ್ತಿ

'ಅನುರಾಧ', ನಂ. 36, 2ನೇ ಅಡ್ಡರಸ್ತೆ

ಆಂಜನೇಯ ನಗರ, ಬನಶಂಕರಿ 3ನೇ ಹಂತ

ಬೆಂಗಳೂರು - 560 085

ಇನ್ನಿತರ ಮಹನೀಯರು / ಸಂಘ ಸಂಸ್ಥೆಗಳು ಟ್ರಸ್ಟ್‌ಗೆ ದೇಣಿಗೆಯನ್ನು ನೀಡಬಹುದು. ಚೆಕ್‌ಗಳು 'ಕೊರವಂಜಿ ಅಪರಂಜಿ' ಹೆಸರಿಗಿರಲಿ.

ಬೇಲೂರು ರಾಮಮೂರ್ತಿ

ಉಪ ಸಂಪಾದಕರು, ಅಪರಂಜಿ

ಎಂ ಟಿ ಆರ್ ಸುತ್ತಿ "ಮುಕ್ತಿನಾಗ"ಕ್ಕೆ.......

- ಶಿವು

ಕಳೆದ ವಾರ ಮಮತಾ ಫೋನ್ ಮಾಡಿದ್ದಳು.

'ಅಂಕಲ್, ನಾಡಿದ್ದು ನೀವು ಮೈಸೂರಿಗೆ ಬರಬೇಕು'

'ಯಾಕೆ? ಏನ್ಸಮಾಚಾರಾ?'

'ಅವತ್ತು ನಮ್ಮಪ್ಪನ ಹುಟ್ಟಿದ ಹಬ್ಬ. ಅಪ್ಪ ಅಮ್ಮ ಎಲ್ಲಾ ಬೆಂಗಳೂರಿನಿಂದ ಬರ್ತಿದಾರೆ. ನೀವು ಮತ್ತು ವೈದ್ಯ ಅಂಕಲ್ ಇಲ್ಲಿಗೆ ಬಂದು ಸರ್ಪ್ರೈಸ್ ಪಾರ್ಟಿಯಲ್ಲಿ ಭಾಗವಹಿಸಬೇಕು. ಖಂಡಿತ ಅಪ್ಪನಿಗೆ ಈ ಬಗ್ಗೆ ಸುಳಿವು ಕೊಡಬೇಡಿ. ಬರ್ತೀರಾ ತಾನೇ?'

ನಾನು ಎತ್ತಿ ಆಡಿಸಿದ ಮಗು. ಇಲ್ಲ ಅನ್ನುಕ್ಕಾಗುತ್ತದೆಯೇ. ಒಡನೆಯೇ ಒಪ್ಪಿದೆ. ಮಾರನೆಯ ದಿನ ನಮ್ಮಕ್ಕನ ಮಗಳು ಪದ್ಮಜಾಗೆ ಈ ಮೈಸೂರು ಭೇಟಿ ಬಗ್ಗೆ ಹೇಳಿದಾಗ, ಅವಳು 'ಹೌ ವಂಡರ್‌ಫುಲ್. ಅಲ್ಲಿ ಹೋದ ಮೇಲೆ ರಿಟರ್ನ್ ಗಿಫ್ಟ್ ಕೇಳೋದು ಮಾತ್ರಾ ಮರೀಬೇಡಿ' ಅಂತ ತಾಕೀತು ಮಾಡಿದ್ದೂ ಆಯಿತು.

ಮಂಗಳವಾರ ಬೆಳಗ್ಗೆ ಹೊರಟಾಗ ಏಳುಗಂಟೆ ಆಗಿತ್ತು. ಕಾರಿನಲ್ಲಿ ಶೀನು, ಸುಹಾಸಿನಿ, ರಮೇಶ್ ಮತ್ತು ನಾನು, ನಾಲ್ಕೇ ಜನ.

'ಬ್ರೇಕ್‌ಫಾಸ್ಟ್ ಎಲ್ಲಿ ಮಾಡೋಣ ಶೀನು? ಎಂಟರ ಹೊತ್ತಿಗೆ ರಾಮನಗರದ ಹತ್ತಿರದ ಕಾಮತ್ ಯಾತ್ರಿ ನಿವಾಸದ ಬಳಿ ಇರುತ್ತೇವೆ. ಅಲ್ಲೇ ಮಾಡೋಣೇನು?'

'ಎಲ್ಲಾದರೂ ಸರಿ. ಇಲ್ಲೆಲ್ಲೋ ಎಂ.ಟಿ.ಆರ್ ನ ಬ್ರಾಂಚ್ ಇದೆಯಂತೇ. ಮೊನ್ನೆ ಸುಹಾಸ್ ತನ್ನ ಭಜನೆ ಗುಂಪಿನೊಂದಿಗೆ ಟ್ರಿಪ್ ಹೋಗಿದ್ದಾಗ ಅಲ್ಲಿಗೆ ಹೋಗಿದ್ದರಂತೆ. ಎಲ್ಲಿ ಬರುತ್ತೆ ಸುಹಾಸ್ ಅದು?'

' ರಾಜ ರಾಜೇಶ್ವರಿ ಆದಮೇಲೆ ಬಂದ ಹಾಗೆ ನೆನಪು . ಮುಕ್ತಿ ನಾಗನ ದೇವಸ್ಥಾನದ ಹಾದಿಯಲ್ಲಿ ಬರುತ್ತೆ ಅದು' ಎಂದರು ಸುಹಾಸಿನಿ.

'ಮುಕ್ತಿ ನಾಗ ಬರೋದು ದೊಡ್ಡ ಆಲದ ಮರದ ಹತ್ತಿರ ಅಲ್ವಾ. ಈಗಾಗಲೇ ಬಿಡದಿ ದಾಟಿದ್ದೀವಿ' ಅಂದ ರಮೇಶ್.

'ದಾರಿಯಲ್ಲಿ ಹಾಗೇ ನೋಡಿಕೊಂಡು ಹೋಗೋಣ. ಎಂ ಟಿ ಆರ್ ನಂತಹ ದೊಡ್ಡ ರೆಸ್ಟುರಾ ಕಂಡೇ ಕಾಣುತ್ತೆ. ಅಲ್ವಾ ರಮೇಶ್' ಶೀನು ಸಮಾಧಾನಮಾಡುವ ದನಿಯಲ್ಲಿ.

ಶೀನು 'ಎಲ್ಲಾದರೂ ಸರಿ' ಎಂದದ್ದು ಕೇಳಿ ನನಗೆ ನಗು ಬಂತು. ಅದಕ್ಕೆ ಕಾರಣವಿಷ್ಟೇ. ದಶಕಗಳಷ್ಟು ಹಳೆಯ ಗೆಳೆತನವಿದ್ದಾಗ ಮಾತುಗಳು ತಮ್ಮದೇ ಆದ ಗೂಢಾರ್ಥ ಪಡೆಯುತ್ತವೆ. ಶೀನುವಿನ 'ಎಲ್ಲಾದರೂ ಸರಿ' ಪದಸಮುಚ್ಚಯದ ಅರ್ಥ, 'ಕಾಮತ್ ಅಂತೆ ಕಾಮತ್ತು. ಎಂ.ಟಿ.ಆರ್ ದೋಸೆ ತಪ್ಪಿಸ್ತೀಯಲ್ಲೋ ಪಾಪಿ. ನಿನಗೆ ಯಾವ ರೌರವ ನರಕ ಕಾದಿಕೆಯೋ.'

ಸರಿ, ಈ ದಂಪತಿಗಳಿಗೆ ಎಂ.ಟಿ.ಆರ್ ದೋಸೆಯ ಮೇಲೆ ಮನಸ್ಸಾಗಿದೆ. ಹೇಗಾದರೂ ಮಾಡಿ ಎಂಟಿಆರ್ ಕಂಡುಹಿಡಿಯಲೇ ಬೇಕು ಎಂದು ನಿರ್ಧರಿಸಿ,

'ಸುಹಾಸಿನಿ, ರಾಜರಾಜೇಶ್ವರಿ ಆಗಿ ಎಷ್ಟು ಕಿಲೋಮೀಟರಿನಂತರ ನೀವು ಎಂಟಿಆರ್ ನೋಡಿದಿರಿ ನೆನಪಿದೆಯೇ?' ಅಂತ ಕೇಳಿದೆ.

ಆಕೆ 'ಮೊದಲು ಕಂಭದ ನರಸಿಂಹ ದೇವಸ್ಥಾನಕ್ಕೆ ಹೋಗಿದ್ವಿ..................' ಅನ್ನುವಷ್ಟರಲ್ಲಿ ರಮೇಶ್ ಬಾಯಿಹಾಕಿ,

'ಕಂಭದ ನರಸಿಂಹ ಮೈಸೂರು ರಸ್ತೆಯಲ್ಲಿ ಎಲ್ಲಿ ಬರುತ್ತೆ ಮೇಡಂ ಕುಣಿಗಲ್ ರೂಟ್ ಅಲ್ವಾ ಅದು.' ಎಂದು ಓಡುತ್ತಿದ್ದ ಭ್ರಮಾಲೋಕದ ಮಾತುಕತೆಗೆ ನೈಜತೆಯ ಕಡಿವಾಣ ತೊಡಿಸಿದ.

ಅಷ್ಟು ಹೊತ್ತಿಗೆ ಕಾರು ಚೆನ್ನಪಟ್ಟಣ ದಾಟಿತ್ತು. ನಾನು ಕಾಂಪ್ರೊಮೈಸ್ ಪರಿಹಾರ ಸಜೆಸ್ಟಿಸಿದೆ.

'ಮದ್ದೂರು ವರೆಗೂ ಕಣ್ಣಲ್ಲಿ ಕಣ್ಣಿಟ್ಟು ಎಂ.ಟಿ.ಆರ್ ಹುಡುಕೋಣ. ಅಲ್ಲಿನವರೆಗೂ ಅದು ಸಿಗದಿದ್ದರೆ ಮದ್ದೂರು ಟಿಫಾನೀಸ್ ನಲ್ಲೇ ನಾಷ್ಟಾ'

ಅಷ್ಟು ಹೊತ್ತಿಗೆ ದಾರಿಯ ಬಲ ಪಕ್ಕದಲ್ಲಿ 'ಹೆಂಚಿನ ಮನೆ' ಎಂಬ ಉಪಹಾರಗೃಹ ಕಣ್ಣಿಗೆ ಬಿತ್ತು. ಸುಹಾಸಿನಿ,

'ಇದೇ ಎಂ.ಟಿ.ಆರ್ ಇರಬಹುದು. ನಾವು ಬಂದ ರೆಸ್ಟುರಾ ಹೀಗೇ ಇತ್ತು' ಎಂದು ಅನುಮಾನಿಸುತ್ತಾ ನುಡಿದರು. ಶೀನುವಿನ ಗುರಿ ಸ್ಥಿರವಾಗಿ ಎಂಟಿಆರ್ ನ ಮೇಲೆ ಕೇಂದ್ರೀಕೃತವಾಗಿದ್ದು ಎಲ್ಲರಿಗೂ ತಿಳಿದದ್ದರಿಂದ ಸುಹಾಸಿನಿಯವರ ಈ ಮಾತು ಹೈಕಮಾಂಡಿನ ಸಭೆಯಲ್ಲಿ ಮನಮೋಹನ್ ಸಿಂಗರ ಮಾತಿನಂತೆ ಕೇಳುಗರಿಲ್ಲದೆ ಕಿಟಕಿಯಾಚೆ ಹಾರಿಹೋಯಿತು. ಮದ್ದೂರು ಟಿಫಾನೀಸ್ ನಲ್ಲಿ ಉಪಹಾರ ಮುಗಿಸಿ ಹೊರಟಾಗ ಘಂಟೆ ಹತ್ತಾಗಿತ್ತು. ಗಂಜಾಂ ಹತ್ತಿರದ ನಿಮಿಷಾಂಬ ದೇವಸ್ಥಾನದಲ್ಲಿ ಮಂಗಳಾರತಿ ಮಾಡಿಸಿ ಮೈಸೂರು ಸೇರುವ ಪ್ಲಾನ್ ನಮ್ಮದು.

'ಈ ಬಾರಿ ಇಂಗ್ಲೆಂಡಿಗೆ ಹೋಗಿ ಬಂದನಂತರ ನೀನು ಬಹಳ ಬದಲಾಗಿರುವಂತೆ ಕಾಣುತ್ತೆ. ಅಲ್ಲಿನ ಅನುಭವಗಳ ಬಗ್ಗೆ ನೀನು ಬರೆದ ಕಾಲಂ ಓದುತ್ತಲೇ ಬಂದಿದ್ದೇನೆ. ಬರೆಯದೇ ಇರುವ ಸಂಗತಿಗಳೇನಾದರೂ ಇದ್ದರೆ ಹೇಳು ಶಿವು' ಅಂತ ಶೀನು ಕೇಳಿದ.

'ಅಂತಹ ಗಹನವಾದ ವಿಷಯಗಳೇನೂ ಇಲ್ಲ. ಮುಖ್ಯವಾಗಿ ನಾವು ಭಾರತೀಯರು ಹುಟ್ಟಾ ವಾಚಾಳಿಗಳು ಎಂಬ ಸತ್ಯದ ಪ್ರತ್ಯಕ್ಷ ಅನುಭವ ನನಗಾಯಿತು. ಒಮ್ಮೆ ನನ್ನ ಗೆಳೆಯ ಅಲನ್ ಮತ್ತು ಅವನ ಹಲವು ಸಂಗಡಿಗರೊಡನೆ ಮಾತನಾಡುತ್ತಾ ಕುಳಿತಿದ್ದೆ. ಭಾರತದ ಬಗ್ಗೆ ಅನೇಕರು ಆಸಕ್ತಿ ಕುತೂಹಲ ತೋರಿಸಿದ್ದರಿಂದ ನನ್ನ ಮಾತು ನಿರರ್ಗಳವಾಗಿಯೇ ಹರಿದಿತ್ತು. ಮಿತ್ರರೆಲ್ಲಾ ಎದ್ದು ಹೋದ ಬಳಿಕ ಅಲನ್ ನನ್ನನ್ನು ಕುರಿತು 'ಕುಮರ್, ನೀನು ನನಗೆ ಸಹೋದರನ ತರಹ. ನಮ್ಮಿಬ್ಬರ ಗೆಳೆತನ ಬಹು ವರ್ಷಗಳ ಕಾಲ ಗಟ್ಟಿಗಡಿತವಾಗಿ ಉಳಿದುಕೊಂಡು ಬಂದಿದೆ. ಹಾಗಾಗಿ ನಾನೇನಾದರೂ ಅಪ್ರಿಯವಾದ ಸತ್ಯವನ್ನು

ನುಡಿದರೆ ನೀನು ತಪ್ಪು ತಿಳಿಯುವುದಿಲ್ಲ ಎಂಬ ಭರವಸೆ ನನಗಿರುವುದರಿಂದ ಈ ಮಾತು ಹೇಳುತ್ತಿದ್ದೇನೆ. ನಮ್ಮ ಸಂಸ್ಕೃತಿಯಲ್ಲಿ ಈ ರೀತಿ ಬೇರೆಯವರಿಗೆ ಅವಕಾಶ ಕೊಡದೇ ಒಬ್ಬರೇ ಸಂಭಾಷಣೆಯನ್ನು ಆಕ್ರಮಿಸಿಕೊಳ್ಳುವುದು ಶಿಷ್ಟಾಚಾರವಲ್ಲ. ಯಾರಾದರೂ ಹಾಗೆ ಮಾಡಿದರೆ ಅವರನ್ನು ತಡೆಯುವುದೂ ಸಭ್ಯತೆಯ ಲಕ್ಷಣವಲ್ಲ. ಹಾಗಾಗಿ ಅಂತಹ ವಾಚಾಳಿಗಳನ್ನು ಸಹಿಸಿಕೊಂಡೇ ಕುಳಿತಿರುತ್ತಾರೆ. ಇದರಿಂದ ನಷ್ಟವಾಗುವುದು ಮಾತುಗಾರನಿಗೇ. ಇತರರ ವೈವಿಧ್ಯಮಯವಾದ ಅಭಿಪ್ರಾಯಗಳನ್ನು ಗ್ರಹಿಸಿ ಅರ್ಥಮಾಡಿಕೊಂಡು, ವಿವರಣೆ ಕೇಳಿ ತನ್ನ ಜ್ಞಾನ ಭಂಡಾರವನ್ನು ಶ್ರೀಮಂತಗೊಳಿಸಿಕೊಳ್ಳುವ ಬದಲು, ತನ್ನ ಮಾತಿನಲ್ಲೇ ಮೋಹಗೊಂಡು ಒಳ್ಳೆಯ ಅವಕಾಶಗಳನ್ನು ಪದೇ ಪದೇ ಕಳೆದು ಕೊಳ್ಳುತ್ತಾನೆ ಇಂತಹ ಮಾತುಗಾರ. ಇನ್ನು ಮುಂದೆ ನಿನ್ನನ್ನು ಯಾರಾದರೂ ಮಾತನಾಡಿಸಿದಾಗ ಈ ಅಂಶವನ್ನು ನೆನಪಿಸಲ್ಲಿಟ್ಟರೆ ಒಳಿತು' ಎಂದು ಹೇಳಿದ.' ಎಂದು ಹೇಳಿ ಸ್ವಲ್ಪ ನಿಲ್ಲಿಸಿದೆ.

ಶೀನು ಪ್ರತಿಕ್ರಿಯಿಸುತ್ತಾ, 'ಹೌದು, ನಿನ್ನ ಮಾತಿನ ಸಂಪೂರ್ಣ ಅರ್ಥ ನನಗಾಗುತ್ತಿದೆ., ಹಾಗೆ ಮಾತನಾಡಿ ತಲೆ ಚಿಟ್ಟು ಹಿಡಿಸಿದರೆ ಮತ್ತೊಮ್ಮೆ ಹೋದಾಗ ಅಂತಹ ಜನ ನಿನ್ನನ್ನು ನೋಡಿದ ತಕ್ಷಣ ಅವಾಯ್ಡ್ ಮಾಡುತ್ತಾರೆ ಅಲ್ಲವೇ.' ಅಂದ.

'ಅವಾಯ್ಡ್ ಮಾಡುವುದು ಅಷ್ಟು ಸುಲಭವಲ್ಲ ಶೀನು. ಈಗ ನಾನು ನಿನ್ನನ್ನು ಅವಾಯ್ಡ್ ಮಾಡಲಿಕ್ಕಾಗುತ್ತದೆಯೇ' ಎಂದೆ. ದಂಪತಿಗಳಿಬ್ಬರೂ ಜೋರಾಗಿ ನಕ್ಕರು. ದಶಕಗಳ ಗೆಳೆತನ ಗಟ್ಟಿಯಾಗುವುದು ಇಂತಹ ಮಾತುಗಳನ್ನು ಜೀರ್ಣಿಸಿಕೊಂಡಾಗ. ಅದಕ್ಕೇ ಸುಹಾಸಿನಿ 'ನೀವಿಬ್ಬರೂ ಏನಾರಾ ಮಾತಾಡ್ರಿ. ಜಗಳ ಆಡೂದು ಮಾತ್ರಾ ನಿಲ್ಲಿಸಬ್ಯಾಡ್ರಿ' ಅಂತ ಪದೇ ಪದೇ ಹೇಳುತ್ತಿರುತ್ತಾರೆ.

ಈ ಜಗಳದ ಬಗ್ಗೆ ನಿಮಗೆ ಸ್ವಲ್ಪ ಹೇಳಬೇಕು. ಅನೇಕ ವರ್ಷಗಳ ಹಿಂದೆ ನಾವೆಲ್ಲಾ ದಕ್ಷಿಣ ಕನ್ನಡಕ್ಕೆ ಒಂದು ಟ್ರಿಪ್ ಹಾಕಿದ್ದೆವು. ಮೊದಲು ಉಡುಪಿಗೆ ಹೋಗಿ, ಅಲ್ಲಿಂದ ಕೊಲ್ಲೂರು, ಮುರುಡೇಶ್ವರ ಮಾರ್ಗವಾಗಿ ಘಟ್ಟ ಹತ್ತಿ ಶಿವಮೊಗ್ಗ ಮಾರ್ಗವಾಗಿ ಬೆಂಗಳೂರಿಗೆ ಹಿಂತಿರುಗುವ ಪ್ರವಾಸ ಅದು. ಘಟ್ಟ ಹತ್ತಿ ಶಿವಮೊಗ್ಗೆಯ ಬಳಿಯ ಜೋಗದ ಜಲಪಾತ ನೋಡಲು ಹೊರಟಿದ್ದೆವು. ಜೋಗಕ್ಕೆ ಸುಮಾರು ಇಪ್ಪತ್ತೈದು ಕಿಲೋಮೀಟರುಗಳಿದ್ದಿರಬಹುದು. ದೂರದಲ್ಲಿ ನೀರಿನ ಭೋರ್ಗರೆತ ಕೇಳಿಸಿತು. ಶೀನು ತಕ್ಷಣ 'ಶಿವು, ಕೇಳಿಸ್ತಾ ಜೋಗದ ಜಲಪಾತದ ಭೋರ್ಗರೆತ' ಅಂತ ಉತ್ಸಾಹದಿಂದ ಹೇಳಿದ. ಇಪ್ಪತ್ತೈದು ಕಿಲೋಮೀಟರ್ ದೂರಕ್ಕೆ ನಯಾಗರಾದ ಭೋರ್ಗರೆತ ಸಹಾ ಕೇಳಿಸಲಾರದು. ಖಂಡಿತವಾಗಿ ಇದು ಬೇರಾವುದೋ ಹರಿಯುವ ನೀರಿನ ಸದ್ದು ಎಂಬುದು ನನಗೆ ಸ್ವತಃಸಿದ್ಧ ಸತ್ಯ. ಆ ಮಾತನ್ನು ಶೀನುವಿಗೆ ಹೇಳಿದೆ. ಆತ ಒಪ್ಪಲಿಲ್ಲ. ಅದು ಜೋಗದ್ದೇ ಎಂದು ಪಟ್ಟು ಹಿಡಿದ. ಅನೇಕ ವರ್ಷಗಳ ನಂತರ ಅಂದು ನಮ್ಮಿಬ್ಬರ ನಡುವೆ ಉದ್ಭವಿಸಿದ ಭಿನ್ನಾಭಿಪ್ರಾಯಕ್ಕೆ ಅತ್ಯಂತ ಆಳವಾದ ಮೂಲಭೂತವಾದ ಗ್ರಹಿಕೆಯ ವಿಭಿನ್ನತೆ ಕಾರಣ ಎಂಬ ಸತ್ಯ ಗೋಚರಿಸಿತು. ನೀರಿನ ಭೋರ್ಗರೆತ ಕೇಳಿಸಿದಾಗ ಜಲಪಾತವನ್ನು ನೋಡುವ ಉತ್ಸುಕತೆಯಲ್ಲಿರುವ ಸಾಹಿತಿಯ ಮನಸ್ಸು ಅದು ಜೋಗದ

ಸದ್ದೆಂದೇ ಖುಷಿಪಡುತ್ತದೆ. ಇಂತಹ ಖುಶಿ ತಪ್ಪು ಗ್ರಹಿಕೆಯಿಂದ ಉಂಟಾದದ್ದೆಂದು ವೈಜ್ಞಾನಿಕ ಮನಸ್ಸು ಕುದಿಯುತ್ತದೆ. ಈ ಸಾಹಿತಿಯ ಮನೋಭಾವ ಮತ್ತು ವೈಜ್ಞಾನಿಕ ಮನೋಭಾವಗಳ ತಿಕ್ಕಾಟವನ್ನು ಎಲ್ಲ ಸಂವಹನಗಳಲ್ಲೂ ನೋಡಬಹುದು. ವೈಜ್ಞಾನಿಕ ದೃಷ್ಟಿಕೋನದಲ್ಲಿ ಖುಷಿ ಉಂಟಾಗುವುದೇ ಇಲ್ಲವೇ ಎಂದು ಕೇಳಿದರೆ, ಅದಕ್ಕೆ ಉತ್ತರ ಕೂಡಾ ಬಹು ಸುಲಭ. ವಿಶ್ವೇಶ್ವರಯ್ಯನವರು ಇದೇ ಜೋಗವನ್ನು ನೋಡಿದಾಗ, ಅವರು ಕಂಡದ್ದು ಕೇವಲ ನೀರನ್ನಲ್ಲ. ಬದಲಿಗೆ, ಅಷ್ಟು ಎತ್ತರದಿಂದ ಧುಮುಕುತ್ತಿರುವ ನೀರಿನಲ್ಲಿ ಅಡಗಿದ್ದ ದೈತ್ಯ ಶಕ್ತಿಯನ್ನು. ಆ ಶಕ್ತಿಯನ್ನು ಪಳಗಿಸುವ ವಿಧಾನ ಅದನ್ನು ಜನ ಹಿತಕ್ಕಾಗಿ ಬಳಸಬಲ್ಲ ಸಾಧ್ಯತೆ ಇವುಗಳು ವಿಜ್ಞಾನಿಯ ಮನಸ್ಸಿಗೆ ಕೊಡುವ ಖುಷಿ ಯಾವ ಸಾಹಿತಿಯ ಖುಷಿಗೂ ಕಡಿಮೆಯಿಲ್ಲ. ಈ ಚಿಂತನೆಯ ನಂತರ ನಾನು ಶೀನುವಿನ ಮಾತು ಕೃತಿಗಳ ಬಗ್ಗೆ ಅತೀವ ತಾಳ್ಮೆ ಹಾಗೂ ಪೂರ್ವಾಗ್ರಹವಿಲ್ಲದ ಅರ್ಥಮಾಡಿಕೊಳ್ಳುವಿಕೆ ಯನ್ನು ಅಭ್ಯಾಸಮಾಡುತ್ತಿದ್ದೇನೆ.

ಇದರಿಂದ ನನಗಾಗಿರುವ ಪ್ರಯೋಜನ ಅಷ್ಟಿಷ್ಟಲ್ಲ.

ನಿಮಿಷಾಂಬ ದೇವಸ್ಥಾನದ ಪರಿಸರ ಹಳೆಯ ಮೈಸೂರಿನ ಗ್ರಾಮಜೀವನವನ್ನು ತೀವ್ರವಾಗಿ ನೆನಪಿಗೆ ತರುತ್ತದೆ. ದೇವಸ್ಥಾನದ ಸೆರಗಿಗೆ ಹರಿಯುತ್ತಿರುವ ನದಿ, ಆಚೆಯ ದಂಡೆಯಲ್ಲಿನ ತೋಪುಗಳು, ನದಿಯಲ್ಲಿ ಮೀಯಲು ಅನುಕೂಲವಾಗುವಂತೆ ಕಟ್ಟಿರುವ ಕಲ್ಲಿನ ಮೆಟ್ಟಲುಗಳು, ಇವೆಲ್ಲವೂ ಇನ್ನೂ ನಮಗೆ ದೊರಕುವಂತಿದೆಯಲ್ಲಾ ಎಂದು ನಿಮಿಷಾಂಬ ಅಮ್ಮನವರಿಗೆ ಮನದಲ್ಲಿಯೇ ವಂದಿಸಿದೆ. ದೇವಸ್ಥಾನದಲ್ಲಿ ಮಂಗಳಾರತಿ ಮುಗಿಸಿ ಹೊರಗೆ ಬಂದು ಮೆಟ್ಟಲುಗಳ ಮೇಲೆ ಕುಳಿತು ಷೂ ಹಾಕಿಕೊಳ್ಳುತ್ತಿದ್ದಾಗ ಹಿಂದಿನಿಂದ 'ಹಲೋ ವೈದ್ಯ' ಎಂಬ ಕೂಗು ಕೇಳಿಸಿತು. ನೋಡಿದರೆ ವಿಜಯೇಂದ್ರ ಮತ್ತು ಉಮ ನಿಂತಿದ್ದಾರೆ. ನಾವು ಹೋಗುತ್ತಿದ್ದ ಪಾರ್ಟಿಯ ಬರ್ಥ್‌ಡೇ ಬಾಯ್ ಮತ್ತು ಅವನ ಸಹಧರ್ಮಿಣಿ. ಶೀನು ಏನಾದರೂ ಅಚಾತುರ್ಯ ಮಾಡುವ ಮುಂಚೆ ಪರಿಸ್ಥಿತಿಯನ್ನು ತಹಬಂದಿಗೆ ತರೋಣವೆಂದು ನಾನು 'ಹಲೋ ವಿಜಯೇಂದ್ರ, ಇಲ್ಲೇ ದೇವಸ್ಥಾನಕ್ಕೆ ಬಂದಿದ್ದೆವು. ಈಗ ಬೆಂಗಳೂರಿಗೆ ಹೊರಟಿದ್ದೇವೆ.' ಎಂದು ಹೇಳಿದೆ. ಶೀನು ಮತ್ತು ಸುಹಾಸಿನಿ ಈ ಮಾತನ್ನೇ ಪುಷ್ಟೀಕರಿಸಿದರು. ಸಧ್ಯ ಸರ್ಪ್ರೈಸ್ ಎಲಿಮೆಂಟ್‌ಗೆ ಹಾನಿಯಾಗಲಿಲ್ಲ.

ಸಂಜೆಯ ಸಂತೋಷಕೂಟ ಮುಗಿಸಿ ಮಾರನೆಯ ದಿನ ಬೆಂಗಳೂರಿಗೆ ಹಿಂತಿರುಗುವಾಗ ನಾನು ಶೀನುವಿನೊಂದಿಗೆ ನಮ್ಮ ರಿಟರ್ನ್ ಟ್ರಿಪ್ ಬಗ್ಗೆ ಮಾತನಾಡಿದೆ.

'ಬೆಳಗಿನ ತಿಂಡಿ ಮುಗಿಸಿ ಇಲ್ಲಿಂದ ಎಂಟಕ್ಕೆ ಹೊರಟರೆ ಹನ್ನೊಂದು ಹನ್ನೊಂದೂವರೆಗೆ ಊರು ಸೇರಬಹುದು' ಎಂದೆ.

'ದಾರಿಯಲ್ಲಿ ಬೇಕಾದರೆ ಎಂಟಿಆರ್ ನಲ್ಲಿ ಕಾಫಿ ಬ್ರೇಕ್ ಮಾಡಬಹುದು' ಎಂದೂ ಕುಹಕವಾಡಿದೆ.

ಶೀನು 'ಈಗ ಮೊದಲು ಚಾಮುಂಡಿ ಬೆಟ್ಟಕ್ಕೆ ಹೋಗಿ ಮಂಗಳಾರತಿ ಮಾಡಿಸಿ ಆಮೇಲೆ ಹೊರಡೋಣ. ದಾರಿಯಲ್ಲಿ ರಂಗನ ತಿಟ್ಟಿನಲ್ಲಿ ಪಕ್ಷಿಗಳನ್ನು ನೋಡಿ ಮುಂದುವರಿದರಾಯಿತು. ಹೇಗಿದ್ದರೂ ನಮಗ್ಯಾರಿಗೂ ಅಂತಹ ರಾಜಕಾರ್ಯ ಏನಿಲ್ಲವಲ್ಲಾ' ಎಂದ.

ತಕ್ಷಣ ನನಗೆ ಹಿಂದೊಮ್ಮೆ ಶೀನು ಮತ್ತು ನಾನು ಯಾವುದೋ ಭಾಷಣದ ಸಲುವಾಗಿ ಬೆಂಗಳೂರಿನಿಂದ ತುಮಕೂರಿಗೆ ಹೋದದ್ದು ನೆನಪಿಗೆ ಬಂತು. ಆ ಸಂದರ್ಭದಲ್ಲಿ, ನಾವು ಹಾದಿಯಲ್ಲಿದ್ದ ಎಲ್ಲ ದೇವಸ್ಥಾನಗಳು, ಕೆರೆ ಕೊಳಗಳು, ಇವನ್ನೆಲ್ಲಾ ಸಾವಧಾನವಾಗಿ ನೋಡಿ, ಸೀಬಿ ನರಸಿಂಹಸ್ವಾಮಿಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಮಾಡಿಸಿ ಐದಾರು ಘಂಟೆಗಳ ನಂತರ ತುಮಕೂರು ಸೇರಿದ್ದೆವು. ಅಂದು ನಾನು ನೋಡಿದ ನೋಟಗಳು ಇಂದಿಗೂ ನೆನಪಿನಲ್ಲಿ ಹಸಿರಾಗಿವೆ. ಹಾಗಾಗಿ, ಈ ಬೆಂಗಳೂರು ಮರುಪಯಣದ ಎಲ್ಲ ವಿವರಗಳನ್ನು ಶೀನುವಿಗೇ ಬಿಟ್ಟು

ನಿಶ್ಚಿಂತೆಯಿಂದ ಹೊರಟೆ.

ಬೆಟ್ಟದ ದೇವಿಗೆ ಪೂಜೆ ಸಲ್ಲಿಸಿ, ರಂಗನ ತಿಟ್ಟನ್ನು ಸೇರಿದಾಗ ಬೆಳಗ್ಗೆ ಒಂಭತ್ತೂವರೆ. ಚಳಿಗಾಲದ ಬಿಸಿಲು ಬಲು ಹಿತವಾಗಿತ್ತು. ನಮ್ಮ ಅಂಬಿಗ ನಾರಾಯಣಪ್ಪ ಮಾತಿನ ಮಲ್ಲ. ಮಕ್ಕಳನ್ನು ಕಾನ್ವೆಂಟಿಗೆ ಕಳಿಸುತ್ತಿದ್ದಾನೆ. ತಿಟ್ಟಿನಲ್ಲಿನ ಎಲ್ಲ ಪಕ್ಷಿಗಳ ವಿವರಗಳನ್ನು ಬಹು ಚೆನ್ನಾಗಿ ತಿಳಿಯ ಹೇಳಿದ.

ನಾನು ಅಂಬಿಗನ ಕೈಯಲ್ಲಿದ್ದ ಹುಟ್ಟನ್ನು ಅವನಿಂದ ಪಡೆದು ಸ್ವಲ್ಪ ದೂರ ದೋಣಿ ನಡೆಸಿದೆ. ರಂಗನ ತಿಟ್ಟಿನಿಂದ ಹಿಂದಕ್ಕೆ ಬರುತ್ತಿದ್ದಾಗ ಹೆದ್ದಾರಿಯನ್ನು ಸೇರುವ ತಿರುವಿನಲ್ಲಿ ಒಂದು ಪುಟ್ಟ ಗುಡಿ ಕಣ್ಣಿಗೆ ಬಿತ್ತು. 'ಇದು ಪಶ್ಚಿಮವಾಹಿನಿ ಅಹೋಬಲ ನರಸಿಂಹಸ್ವಾಮಿ ಗುಡಿ. ಯಾವಾಗ ಬಂದರೂ ಗುಡಿ ಮುಚ್ಚಿರುತ್ತಿತ್ತು. ಅದೃಷ್ಟವಸಾತ್ ಇಂದು ತೆರೆದಿದೆ. ದರ್ಶನಮಾಡಿ ಹೋಗೋಣ' ಎಂದು ಶೀನು ರಮೇಶನಿಗೆ ಕಾರನ್ನು ನಿಲ್ಲಿಸಲು ಹೇಳಿದ. ದೇವಸ್ಥಾನದ ಅರ್ಚಕರು ಪೂಜೆ ಮಾಡಿ, ಪ್ರಸಾದ ಕೊಟ್ಟರು. ಹುಗ್ಗಿ ರುಚಿಯಾಗಿತ್ತು. ಹತ್ತಿರದಲ್ಲೇ ಇದ್ದ ಕೊಳವೆಭಾವಿಯನ್ನು ಚಾಲನೆಗೊಳಿಸಿ ಕೈತೊಳೆದು ಪ್ರಯಾಣ ಮುಂದುವರಿಸಿದೆವು. ಮುಂದೆ ಚನ್ನಪಟ್ಟಣ ದಾಟಿದನಂತರ ಕೆಂಗಲ್ ಹನುಮಂತರಾಯನ ಗುಡಿಯಲ್ಲಿ ಮತ್ತೆ ಮಂಗಳಾರತಿ, ಪ್ರಸಾದ ವಿನಿಯೋಗ 'ಯಾವ ರಾಜಕಾರ್ಯವೂ ಇಲ್ಲವಲ್ಲಾ. ನಿಧಾನವಾಗಿರು. ರಿಲ್ಯಾಕ್ಸ್ ಮಾಡಿಕೋ' ಅಂತ ನನಗೆ ನಾನೇ ಹೇಳಿಕೊಳ್ಳುತ್ತಾ ಸಮಾಧಾನಚಿತ್ತದಿಂದಿರಲು ಪ್ರಾಮಾಣಿಕ ಪ್ರಯತ್ನ ನಡೆಸಿದೆ.

ಮುಂದೆ ಹಾದಿಯ ಎಡಭಾಗದಲ್ಲಿ ಶಿವಳ್ಳಿ ಉಪಹಾರಗೃಹ ಕಾಣಿಸಿತು. ಅದರ ಬೋರ್ಡಿನ ಕೆಳಗೆ ಎಂ ಟಿ ಆರ್ ಫ್ರಾಂಚೈಸ್ ಎಂದೂ ಬರೆದಿತ್ತು.

ಇದನ್ನು ನೋಡಿದ ರಮೇಶ್ 'ಇಲ್ಲೇನೇನ್ರಮ್ಮಾ ನೀವು ಬಂದದ್ದು?' ಅಂತ ಕೇಳಿದ.

ಸುಹಾಸಿನಿ 'ಹೌದು ಹೌದು ಇದೇ ಇದೇ ಎಂ ಟಿ ಆರ್' ಅಂತ ಉತ್ಸಾಹದಿಂದ ಕೂಗಿದರು. ಕಾರನ್ನು ನಿಲ್ಲಿಸಿ ಕಾಫಿಗೆ ಇಳಿದೆವು.

ಕಾಫಿ ಕುಡಿಯುತ್ತಿದ್ದಾಗ ರಮೇಶ್, ‘ಓಹೋ ಈಗ ಅರ್ಥ ಆಯಿತು. ನೀವು ಕುಣಿಗಲ್ ರಸ್ತೆಯಲ್ಲಿ ಹೋಗಿ ಚೆನ್ನರಾಯ ಪಟ್ಟಣದ ಹತ್ತಿರ ಎಡಕ್ಕೆ ತಿರುಗಿ ಕಂಭದ ನರಸಿಂಹದೇವರ ಗುಡಿಯಲ್ಲಿ ದರ್ಶನ ಮಾಡಿ ಅಲ್ಲಿಂದ ಪಾಂಡವಪುರದ ಮೂಲಕ ಮೈಸೂರು ರಸ್ತೆ ಸೇರಿ ಇಲ್ಲಿ ಕಾಫಿ ಕುಡಿದು ದೊಡ್ಡ ಆಲದ ಮರದ ಹತ್ತಿರದ ಮುಕ್ತಿನಾಗ ನೋಡಿಕೊಂಡು ರಾಜರಾಜೇಶ್ವರಿ ಮೂಲಕ ಬೆಂಗಳೂರು ಸೇರಿದ್ರಿ, ಅಲ್ಲವೇನ್ರಮ್ಮಾ’ ಎಂದು ಷೆರ್ಲಾಕ್‌ಹೋಮ್ಸ್‌ನಂತೆ ಎಂ ಟಿ ಆರ್ ಸಮಸ್ಯೆಗೆ ಪರಿಹಾರ ಸೂಚಿಸಿದ.


ಸುಹಾಸಿನಿ ಉತ್ತರಿಸುವ ಮೊದಲೇ ನಾನು ‘ಕೊಂಕಣ ಸುತ್ತಿ ಮೈಲಾರಕ್ಕೆ, ಎಂ ಟಿ ಆರ್ ಸುತ್ತಿ ಮುಕ್ತಿನಾಗಕ್ಕೆ’ ಎಂದು ಕುಹಕ ನುಡಿದೆ.

ನೆರೆದ ಸಭಿಕರೆಲ್ಲರೂ ನಕ್ಕು ತಮ್ಮ ಕರ್ತವ್ಯವನ್ನು ನಿರ್ವಹಿಸಿದರು.

★★★

ನಿಮ್ಮನ್ನ ಉದ್ಧಾರ ಮಾಡ ಉದ್ದ ನೀರಲ್ಲಿ ಮುಳಗಿಸ್ತೀವಿ ಅಂದ್ರು ಈ ರಾಜಕೀಯದವರ ನಂಬಬೇಡಿ... ಯಾಕಂದ್ರೆ... ಕನ್ನಡಕ್ಕೆ ಸರಿಯಾದ ಸ್ಥಾನ ಮಾನ ತರ್ತೀವಿ ಅಂತ ಈ ಪರೆವಿಗೂ ಬೊಗಳೇ ಬಿಡ್ತಾನೆ.... ಬಂದಿದ್ದಾರಾ... ಎಚ್ಚರವಾಗಿರಿ





ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ರಾ.ಶಿ. ಅವರಿಂದ ಪ್ರಾರಂಭವಾದ, ವೈದ್ಯಕೀಯ ಮತ್ತು ಸಾಹಿತ್ಯಗಳ ಸಮ್ಮಿಲನದ ಕನ್ನಡ ಲೇಖಕರ ಪರಂಪರೆಗೆ ಡಾ॥ ಎಚ್.ಕೆ. ಸಂಜುಂಡಸ್ವಾಮಿ ಈಚಿನ ಸೇರ್ಪಡೆ. ಮೈಸೂರು ಮೆಡಿಕಲ್ ಕಾಲೇಜಿನಿಂದ ಪದವಿ ಗಳಿಸಿದ ಸ್ವಾಮಿ ಮುಂದೆ ಅಮೆರಿಕಾ ಕೆನಡಗಳಲ್ಲಿ ಶಸ್ತ್ರ ಚಿಕಿತ್ಸೆಯಲ್ಲಿ ಉನ್ನತ ಶಿಕ್ಷಣ ಹಾಗೂ ತರಬೇತಿ ಪಡೆದರು. ಆ ದೇಶಗಳಲ್ಲೇ ಅವರು ಪಿತ್ತಕೋಶದ ಕ್ಯಾನ್ಸರ್, ಶ್ವಾಸಕೋಶ ಹಾಗೂ ಅನ್ನನಾಳಗಳ ರೋಗಗಳ ಚಿಕಿತ್ಸೆಗಳ ಬಗೆಗೆ ಹೆಚ್ಚಿನ ಸಂಶೋಧನೆ ನಡೆಸಿದ್ದಾರೆ. ಅತ್ಯಾಧುನಿಕ ಸಲಕರಣೆಗಳಿರುವ ಅಮೆರಿಕಾ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದ ಸ್ವಾಮಿಗೆ ಇಂದು ರೋಗ ನಿದಾನದಲ್ಲಿ ವ್ಯಾಪಕವಾಗಿರುವ ಎಂಡೋಸ್ಕೋಪಿಯ ಅಪಾರ ಸಾಧ್ಯತೆಗಳನ್ನು ದಾಖಲಿಸಿದ್ದ ಸ್ವಾಮಿ ಪರಿಣತಿಯನ್ನು ವಿಶ್ವದಲ್ಲೇ ಅತಿ ಪ್ರತಿಷ್ಠಿತ National Geographic Channel 1980ರ ದಶಕದಲ್ಲಿ ಪ್ರಸಾರ ಮಾಡಿದ್ದ Man the incredible machine ಡಾಕ್ಯುಮೆಂಟರಿ ನಿರ್ಮಾಣದಲ್ಲಿ ಬಳಸಿಕೊಂಡಿತ್ತಂತೆ.

ನಲ್ವತ್ತು ವರ್ಷಗಳು ಬಿಡುವಿಲ್ಲದೆ ದುಡಿದ ಸ್ವಾಮಿ ತಮ್ಮ 65ನೆಯ ವಯಸ್ಸಿನಲ್ಲಿ ಸರ್ಜರಿ ವೃತ್ತಿಗೆ ಮುಕ್ತಾಯ ಹಾಡಿ ತಮ್ಮ ಚಿಕ್ಕಂದಿನ ಒಲವುಗಳಾದ ಪ್ರಪಂಚ ಪರ್ಯಟನೆಯ ಮೋಹ, ಪಿಯಾನೋ ಕಲಿಯಬೇಕೆಂಬ ಆಸೆ ಹಾಗೂ ಬರೆಯಬೇಕೆಂಬ ಹಂಬಲಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ಈ ಅವಧಿಯಲ್ಲಿ ಇವರ ಐದು ಕನ್ನಡ ಪುಸ್ತಕಗಳು ಪ್ರಕಟವಾಗಿವೆ. ಅವುಗಳಲ್ಲಿ ನಾಲ್ಕು ವರ್ಷಗಳ ಹಿಂದೆ ಪ್ರಕಟವಾದ 'ಕಲಸು ಮೇಲೋಗರ' ಹರಟೆ, ಲಘುಪ್ರಬಂಧ ಇತ್ಯಾದಿಗಳ ಸಂಕಲನ. ಇಲ್ಲಿನ ವಿಷಯ ವ್ಯಾಪ್ತಿ ಮೈಸೂರಿನಲ್ಲಿ ರಾಮಾಶಾಸ್ತ್ರಿಗಳ ಮನೆ ಹುಡುಕಾಟ, ಅಮೆರಿಕಾದ ಪಕ್ಕದ ಮನೆಯ ಪೀಟ್‌ನ ಫಿಶಿಂಗ್ ಹವ್ಯಾಸ, ಪ್ರಖ್ಯಾತ ಬೇಸ್‌ಬಾಲ್ ಆಟಗಾರನ ವಾರಸುದಾರರ ನಡುವಿನ ವಿಚಿತ್ರ ಕಲಹ, ಅಲ್ಲಿನ ಜನರ ಕೋರ್ಟು ಕಟ್ಟಲೆಗಳ ವೈಖರಿ, ರಷ್ಯಾದಲ್ಲಿ ಕಂಡ ಡಾಲರ್ ವ್ಯಾಮೋಹ - ಹೀಗೆ ವಿಶ್ವವಿಶಾಲವಾಗಿದೆ.

ಈಚೆಗೆ ಪ್ರಕಟವಾದ 'ಸುಶ್ರುತನ ಹಾದಿಯಲ್ಲಿ' ವೈದ್ಯಕೀಯ ವಿದ್ಯಾರ್ಥಿಯಾಗಿ, ಯಶಸ್ವಿ ಸರ್ಜನ್ ಆಗಿ ಸ್ವಾಮಿ ಅನುಭವಗಳ ಕಥನ. ಈ ಪುಸ್ತಕದಲ್ಲಿ ತಾನು ಮಾಡಿದ ಒಂದು ತಪ್ಪಿಗೆ ತನ್ನನ್ನೇ ಕ್ಷಮಿಸದ ಡಾ॥ ಜೇಕಬ್ಸ್, ತಮಗೆ ಆಪ್ತರಾಗಿದ್ದ ರಾಷ್ಟ್ರಪತಿ ಕೆನಡಿ ಕೊಲೆಯ ದುರಂತದ ಸುದ್ದಿ ತಿಳಿದ ಸಮಯದಲ್ಲೂ ತನ್ನ ವೃತ್ತಿ ಧರ್ಮವನ್ನು ಮರೆಯದ ಡಾ॥ ಮಿಲ್ಲರ್ ಅಂತಹ ಅದ್ಭುತ ವ್ಯಕ್ತಿಚಿತ್ರಗಳ ಜೊತೆಯಲ್ಲಿ ಜೀವನ್ಮರಣಗಳ ನಡುವೆ ಸದಾ ಹೋರಾಟ ನಡೆಯುತ್ತಿರುವ ಆಸ್ಪತ್ರೆಗಳಲ್ಲಿಯೂ ಕಾಣಬಹುದಾದ ಹಾಸ್ಯವೂ ಇದೆ.

ಇಲ್ಲಿರುವ 'ಜೇಂಸ್ ಸ್ಮಿತ್ ಪ್ರಸಂಗ' ಸ್ವಾಮಿ ಅಮೆರಿಕಾದ ಆಸ್ಪತ್ರೆಯೊಂದರಲ್ಲಿ ನೋಡಿದ ಇಂತಹ ಒಂದು ಘಟನೆ.

ಜೇಂಸ್ ಸ್ಮಿತ್ ಪ್ರಸಂಗ

– ಡಾ|| ಎಚ್.ಕೆ. ನಂಜುಂಡಸ್ವಾಮಿ

'ಆಸ್ಪತ್ರೆಯದು ಗಂಭೀರ ವಾತಾವರಣ. ಯಾವಾಗಲೂ ಜೀವನ್ಮರಣದ ಹೋರಾಟ ನಡೆಯುತ್ತಿರುವ ಜಾಗ. ಅದರ ಹೆಸರು ಕೇಳಿದರೇ ಎದೆಯನ್ನು ನಡುಗಿಸುವ ಸ್ಥಳ. ಇಂತಹ ಕಡೆ ಹಾಸ್ಯಕ್ಕೆ ಜಾಗವೆಲ್ಲಿ?' ಎಂದು ನೀವು ಕೇಳಬಹುದು. ಕೇಳಿ. ತಪ್ಪೇನಿಲ್ಲ. ಆದರೆ ಒಂದು ವಿಷಯವನ್ನು ನೀವು ಗಮನಿಸಬೇಕು. ಸ್ಕೂಲು ಕಾಲೇಜುಗಳಂತೆ. ಆಫೀಸುಗಳಂತೆ, ಫ್ಯಾಕ್ಟರಿಗಳಂತೆ ಆಸ್ಪತ್ರೆಗಳೂ ಸಹ ಜನ ಕೆಲಸ ಮಾಡುವ ಜಾಗ. ಹತ್ತು ಜನ ಕಲೆತು ಬೆರೆಯುವ ಜಾಗ. ಹಾಗಿದ್ದ ಮೇಲೆ ಮಿಕ್ಕೆಲ್ಲ ಮಾನವೀಯತೆಯ ಗುಣದೋಷಗಳೆಲ್ಲ ಆಸ್ಪತ್ರೆಯಲ್ಲೂ ಬೇರು ಬಿಟ್ಟಿರುತ್ತವೆ. ಅದರಲ್ಲಿ ಹಾಸ್ಯವೂ ಒಂದಲ್ಲವೇ?

ನನ್ನ ನಲವತ್ತು ವರ್ಷಗಳ ವೈದ್ಯಕೀಯ ಜೀವನದ ಬಹುಭಾಗವನ್ನು ನಾನು ಕಳೆದದ್ದು ಆಸ್ಪತ್ರೆಯಲ್ಲಿ. ಅದರಲ್ಲೂ ಆಪರೇಷನ್ ರೂಮಿನಲ್ಲಿ. ಆ ದಿನಗಳಲ್ಲಿ ನಾನು ಅಲ್ಲಿ ಕಂಡ ಒಂದು ರಸಮಯ ಹಾಸ್ಯ ಸನ್ನಿವೇಶ ಇಲ್ಲಿದೆ.

ನಾಲ್ಕು-ಸೌತ್ ವಾರ್ಡಿನಲ್ಲಿ ಗಡಿಬಿಡಿ. ಬೆಳಗ್ಗೆ ತಾನೆ ಓಡಾಡಿಕೊಂಡಿದ್ದ ಜೇಂಸ್ ಸ್ಮಿತ್ ಇದ್ದಕ್ಕಿದ್ದಂತೆ ನಿಸ್ತೇಜನಾಗಿ ಮಲಗಿದ್ದ. ವಯಸ್ಸಾಗಿತ್ತು, ನಿಜ. ಆದರೆ ಇದ್ದಕ್ಕಿದ್ದಂತೆ ಹೀಗಾಗುವುದೆಂದರೇನು? ನರ್ಸು 'ಕೋಡ್ ಬ್ಲೂ' ಕೂಗಿಸಿದಳು. ಆಸ್ಪತ್ರೆಯಲ್ಲಿದ್ದ ಡಾಕ್ಟರು - ನರ್ಸುಗಳೆಲ್ಲ ಅಲ್ಲಿಗೆ ನುಗ್ಗಿದರು. ಕಿಷ್ಕಿಂಧ. ಕೆಲವರು ಅವನನ್ನು ಜೋರಾಗಿ ಅಲ್ಲಾಡಿಸಿದರು, ಮತ್ತೆ ಕೆಲವರು ಮೂತಿಗೆ ಮೂತಿ ಇಟ್ಟು, ಉಸಿರಾಡಿಸಿದರು.. ಎದೆಗೆ ಗುದ್ದಿದರು, ಕೈಗೆ-ಕಾಲಿಗೆ-ಎದೆಗೆ ದಬ್ಬಳದಿಂದ ಚುಚ್ಚಿ ಚಿತ್ರಹಿಂಸೆ ಕೊಟ್ಟರು. ಕಡೆಗೆ ಬೇರಾವ ದಾರಿಯೂ ಕಾಣದೆ ಅವನ ಹೃದಯಕ್ಕೇ ಬಲವಾದ 'ಎಲೆಕ್ಟ್ರಿಕ್ ಷಾಕ್' ಕೊಟ್ಟರು. ನಿಸ್ತೇಜನಾಗಿ ಮಲಗಿದ್ದ ಜೇಂಸ್ ಸ್ಮಿತ್ ಸೂರಿನವರೆಗೆ ಹಾರಿ ಪುನಃ ನಿಸ್ತೇಜನಾಗಿಯೇ ಹಾಸಿಗೆಯ ಮೇಲೆ ಬಿದ್ದ. ಡಾಕ್ಟರುಗಳೆಲ್ಲ ಬಹಳ ಯೋಚನೆ ಮಾಡಿ. 'ಇವನು ಸತ್ತೇ ಇದ್ದಾನೆ' ಎಂದು ನಿರ್ಧರಿಸಿದರು.

ಜೇಂಸ್ ಸ್ಮಿತ್ ಸತ್ತಿದ್ದಾನೆಂದು ತಿಳಿದು ಬಂದಿದ್ದವರೆಲ್ಲಾ ಅಲ್ಲಿಂದ ಕಳಚಿಕೊಂಡರು. ಕಡೆಗೆ ಅಲ್ಲಿ ಉಳಿದಿದ್ದವಳು ನರ್ಸುಗಳಲ್ಲೆಲ್ಲ ಕೆಳ ಹಂತದಲ್ಲಿದ್ದ ಹೊಸ L.P.N.- Licensed Practical Nurse, ಜೂಡಿ. ಸ್ಮಿತ್‌ನ ಮನೆಯವರಿಗೆ ಅವನ ಅನಿರೀಕ್ಷಿತ ಸಾವಿನ ಸುದ್ದಿಯನ್ನು ಕೊಡುವ ಕೆಲಸ ಅವಳ ಹೆಗಲ ಮೇಲೆ ಬಿತ್ತು. ವಾರ್ಡಿನ ನರ್ಸಿಂಗ್ ಸ್ಟೇಷನ್ನಿಗೆ ಹೋಗಿ ಜೇಂಸ್ ಸ್ಮಿತ್‌ನ ಚಾರ್ಟನ್ನು ತೆಗೆದು ನೋಡಿದಳು. ಮೊದಲ ಪೇಜಿನಲ್ಲೇ ಅವನ ಮನೆಯ ಟೆಲಿಫೋನು ನಂಬರಿತ್ತು. ಟೆಲಿಫೋನು ಮಾಡಿದಳು.

'ಹಲೊ'

'ಇದು ಆಸ್ಪತ್ರೆಯಲ್ಲಿ ಪೇಷಂಟ್ ಆಗಿರುವ ಜೇಂಸ್ ಸ್ಮಿತ್ ಅವರ ಮನೆ ತಾನೆ?'

'ಹೌದು'

'ಇದು ಆಸ್ಪತ್ರೆ. ನಾನು ನರ್ಸ್ ಜೂಡಿ. ಯಾರ ಜೊತೆ ಮಾತನಾಡುತ್ತಿದ್ದೇನೆ.'

'ನಾನು ಎಲ್ಮೋ. ಜೇಂಸ್ ಸ್ಮಿತ್‌ನ ಭಾವಮೈದ.'

'ಜೇಂಸ್ ಸ್ಮಿತ್‌ನ ಪತ್ನಿ ಅಲ್ಲಿದ್ದಾರೆಯೇ?'

'ಇಲ್ಲವಲ್ಲಾ. ಅವಳು ನನ್ನ ಅಕ್ಕ. ಅವಳು ಸತ್ತು ಆಗಲೇ ನಾಲ್ಕೈದು ವರ್ಷವಾಯಿತು.'

'ಅವರ ಮಕ್ಕಳು?'

'ಅವರಿಗೆ ಮಕ್ಕಳೇ ಇಲ್ಲ. ಅವರ ನೆಂಟ ಎಂದು ಇರುವವನು ನಾನೊಬ್ಬನೇ.'

'ಎಲ್ಮೋ ಅವರೇ, ಇದನ್ನು ಹೇಗೆ ನಿಮಗೆ ತಿಳಿಸುವುದೇ ನನಗೆ ಗೊತ್ತಾಗುತ್ತಿಲ್ಲ... ಈಗ ಒಂದು ಗಂಟೆಗೆ ಮುಂಚೆ ನಿಮ್ಮ ಭಾವ ಜೇಂಸ್ ಸ್ಮಿತ್ ಹೋಗಿಬಿಟ್ಟರು.'

'ಹಾಂ...?'

'ಹೂಂ...! ತೀರಿಕೊಂಡರು. ಸತ್ತೇ ಹೋದರು. ಡಾಕ್ಟರುಗಳು ಎಷ್ಟು ಪ್ರಯತ್ನ ಮಾಡಿದರೂ ಅವರನ್ನು ಉಳಿಸಲಾಗಲಿಲ್ಲ.'

'ಅರೆ, ಬೆಳಿಗ್ಗೆ ಅವರೊಡನೆ ಮಾತನಾಡಿದ್ದೆನಲ್ಲಾ?'

'ಹೌದು. ಇದು ಅನಿರೀಕ್ಷಿತವಾಗಿ ನಡೆದ ಸಂಗತಿ. ದಯವಿಟ್ಟು ಆಸ್ಪತ್ರೆಗೆ ಬಂದು ಉತ್ತರ ಕ್ರಿಯೆಗಳಿಗೆ ಸಿದ್ಧತೆಗಳನ್ನು ಮಾಡಬೇಕು. ಆದಷ್ಟು ಬೇಗ ಬನ್ನಿ.' ಎಂದು ನರ್ಸ್ ಜೂಡಿ ಹೇಳಿ ಟೆಲಿಫೋನು ಕೆಳಗಿಟ್ಟು ಬೆವರೊರೆಸಿಕೊಂಡಳು.

ಎಲ್ಮೋ ತಬ್ಬಿಬ್ಬಾಗಿ ಕುಳಿತ. ಅವನಿಗೆ ಮೂವತ್ತು ವರ್ಷ. ಕೆಲಸವಿಲ್ಲ. ಮಿಡಲ್ ಸ್ಕೂಲಿನ ವಿದ್ಯಾಭ್ಯಾಸವನ್ನೇ ಮುಗಿಸಲು ಸಾಧ್ಯವಾಗದೇ ಸ್ಕೂಲು ಬಿಟ್ಟು ಕುಳಿತಿದ್ದ. 'ಒಂದಾರು ತಿಂಗಳು ಇಲ್ಲೇ ಬಂದಿರು' ಎಂಬ ಅಕ್ಕನ ಆಹ್ವಾನದ ಮೇಲೆ ಭಾವನ ಮನೆಗೆ ಬಂದು ಆರು ವರ್ಷವಾಗಿತ್ತು. ಅಕ್ಕ ಹೋಗಿಬಿಟ್ಟಮೇಲೆ ಭಾವನಿಗೆ ಸಹಾಯವಾಗಿರುವ ಭರವಸೆ ಕೊಟ್ಟು ಅಲ್ಲೇ ಉಳಿದಿದ್ದ. ಭಾವನಿಗೂ ಅವನಿಗೂ ಅಂತಹ ಅನ್ಯೋನ್ಯತೆ ಏನಿರಲಿಲ್ಲ. ಆದರೆ ಆ ಮನೆ ಬಿಟ್ಟು ಬೇರೆ ಹೋಗಲು ಜಾಗವೆಲ್ಲಿ?

ಆ ದಿನವೂ ಎಂದಿನಂತೆ ಬೆಳಗ್ಗೆ ಒಂಬತ್ತಕ್ಕೇ ಎದ್ದು ಕಾಫಿ ಮಾಡಲು ಹವಣಿಸುತ್ತಿದ್ದ. ಅಷ್ಟು ಹೊತ್ತಿಗೆ ಆಸ್ಪತ್ರೆಯಿಂದ ಅವನ ಭಾವನ ಟೆಲಿಫೋನು ಕರೆ ಬಂದಿತ್ತು.

'ಇವತ್ತು ಮಧ್ಯಾಹ್ನ ಎರಡು ಗಂಟೆಗೆ ನನ್ನನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡುತ್ತಾರೆ. ಎರಡೂವರೆಗೆ ಸರಿಯಾಗಿ ನನ್ನನ್ನು ಕರೆದುಕೊಂಡು ಹೋಗಲು ಕಾರು ತೆಗೆದುಕೊಂಡು ಬಾ. ತಡ ಮಾಡಿಯೇ. ಎರಡೂವರೆಗೆ ಸರಿಯಾಗಿ ಇಲ್ಲಿಗೆ ಬಂದು ನಿನ್ನ ಮುಸುಡಿ ತೋರಿಸದಿದ್ದರೆ, ನಿನ್ನ ಛಮಡಾ ಸುಲಿದುಬಿಡುತ್ತೇನೆ.' ಎಂದಿದ್ದ ಭಾವ.

ಆಸ್ಪತ್ರೆಯಿಂದ ನರ್ಸಿನ ಕರೆ ಬಂದಾಗ, ಎಲ್ರೋ ಆಸ್ಪತ್ರೆಗೆ ಹೋಗಲು ಸಿದ್ಧನಾಗುತ್ತಿದ್ದ. ಈಗ ಇದ್ದಕ್ಕಿದ್ದಂತೆ ಈ ಸುದ್ದಿ!

ಗಡಿಯಾರ ನೋಡಿದ. ಅಯ್ಯಯ್ಯೋ, ಆಗಲೇ ಎರಡಾಗುತ್ತ ಬಂದಿದೆ. ಭಾವ ಎರಡೂವರೆಗೆ ಇಲ್ಲಿಗೆ ಬಂದಿರಬೇಕೆಂದು ತಾಕೀತು ಮಾಡಿದ್ದಾನೆ ಎಂದು ಜ್ಞಾಪಿಸಿಕೊಂಡ. ಮೈ ಬೆವರಿತು. ಆದರೆ ಕೂಡಲೇ, 'ಅವನು ಇನ್ನಿಲ್ಲ, ಹೆದರಬೇಕಿಲ್ಲ' ಎಂಬ ವಿಷಯ ಜ್ಞಪ್ತಿಗೆ ಬಂದು, ದೌಡಾಯಿಸುತ್ತಿದ್ದ ಅವನ ಎದೆಬಡಿತ ನಿಧಾನವಾಗಿ ಕಳಾಯಿಸಲು ಪ್ರಾರಂಭಿಸಿತು. 'ಸತ್ತಮೇಲೆ ಅವನಿಗೆ ಕಾಲದ ಪರಿವೆ ಎಲ್ಲಿ? ನಿಧಾನವಾಗಿ ಹೋದರೆ ಅವನಿಗೇನು ನಷ್ಟ?' ಎಂದುಕೊಳ್ಳುತ್ತಾ ನೆಮ್ಮದಿಯಿಂದ ಹಾಗೇ ಕುಳಿತ. ಎಲ್ರೋವಿನ ಮನಸ್ಸು, ಭಾವನಿಲ್ಲದ ತನ್ನ ಜೀವನದ ಕಡೆ ಯೋಚಿಸತೊಡಗಿತು. ಇನ್ನು ಜೀವನ ಹೇಗೆ? ಕೆಲಸ ಹುಡುಕಬೇಕೇ? ಕೆಲಸವೇನನ್ನೋ ಹುಡುಕಬಹುದು. ಆದರೆ ಎಂಥ ಕೆಲಸ ಮಾಡಲು ನನಗೆ ಸಾಧ್ಯ? ಕೆಲಸ ಮಾಡದೆ ದುಡ್ಡು ಕಮಾಯಿಸುವ ರೀತಿಗಳು ಯಾವುದಿವೆ? ಇತ್ಯಾದಿ ಹತ್ತಾರು ಪ್ರಶ್ನೆಗಳು ಅವನ ತಲೆ ತಿನ್ನಲು ಪ್ರಾರಂಭಿಸಿದವು.

ಹಾಗೇ ಯೋಚಿಸುತ್ತಿದ್ದಂತೆ, ಅವನಿಗೆ ಭಾವನ ಕಬ್ಬಿಣದ ಪೆಟ್ಟಿಗೆಯ ಜ್ಞಾಪಕ ಬಂತು. ಭಾವ ಜೇಂಸ್ ಸ್ಮಿತ್‌ಗೆ ಬ್ಯಾಂಕಿನ ಮೇಲೆ ನಂಬಿಕೆ ಇರಲಿಲ್ಲ. ಅವನಿಗೆ ಬರುತ್ತಿದ್ದ ಪೆನ್ಷನ್‌ನಲ್ಲಿ ಖರ್ಚಾಗಿ ಉಳಿದಿದ್ದನ್ನು ಒಂದು ಸಣ್ಣ ಕಬ್ಬಿಣದ ಪೆಟ್ಟಿಗೆಯಲ್ಲಿ ಹಾಕಿರುತ್ತಿದ್ದ. ಅದಕ್ಕೆ ಬೀಗವೇನೂ ಇಲ್ಲ. 'ಈ ಪೆಟ್ಟಿಗೆಯನ್ನೇನಾದರೂ ಮುಟ್ಟೀಯೆ? ನಿನ್ನ ಛಮಡಾ ಸುಲಿದು ಹಾಕಿಬಿಡುತ್ತೇನೆ' ಎಂಬ ಎಚ್ಚರಿಕೆಯ ನುಡಿಗಳೇ ಎಲ್ರೋವನ್ನು ಆ ಪೆಟ್ಟಿಗೆಯಿಂದ ದೂರವಿಡಲು ಸಾಕಾಗಿತ್ತು.

ಛಮಡಾ ಸುಲಿಯಲು ಈಗ ಅವನೇ ಇಲ್ಲ ಎಂದು ಎಲ್ರೋವಿಗೆ ಧೈರ್ಯ ಬಂದಿತ್ತು. ಎಲ್ರೋ ಪೆಟ್ಟಿಗೆಯನ್ನು ಜೇಂಸ್ ಮಂಚದ ಕೆಳಗಿಂದ ಎಳೆದು ನೋಡಿದ. ಕೈ ನಡುಗುತ್ತಿದ್ದರೂ ಹಾಗೇ ಅದರ ಮುಚ್ಚಲ ತೆಗೆದ. ಒಳಗೆ ದೊಡ್ಡದೊಂದು ಕಂತೆ ಡಾಲರು ನೋಟುಗಳು! ಸದ್ಯಕ್ಕೆ, ಕೆಲವು ವಾರಗಳವರೆಗಾದರೂ ಜೀವನ ನಡೆಸಲು ಏನೂ ತೊಂದರೆಯಿಲ್ಲ ಎಂದುಕೊಳ್ಳುತ್ತಾ ಆ ನೋಟಿನ ಕಂತೆಯಿಂದ ಒಂದು ಅರ್ಧ ಡಜನ್ ನೋಟುಗಳನ್ನು ಜೇಬಿಗೆ ಹಾಕಿಕೊಂಡ! ಪೆಟ್ಟಿಗೆಯನ್ನು ಹಾಗೇ ಎತ್ತಿಕೊಂಡು ಬಂದು ತನ್ನ ಮಂಚದ ಕೆಳಗಿಟ್ಟು ಆಸ್ಪತ್ರೆಯ ಕಡೆಗೆ ಹೊರಟ.

ಒಂದು ಅರ್ಧ ಮೈಲು ಹೋಗುವಷ್ಟರಲ್ಲೇ ರಸ್ತೆಯಲ್ಲಿ ಬಲಗಡೆಗೆ ಒಂದು ಪಡಖಾನೆ ಕಂಡಿತು. ಭಾವನ ಮರಣದಿಂದ ಮನಸ್ಸಿಗೆ ಘಾಸಿಯಾಗಿದೆ, ಹೊಟ್ಟೆಗೆ ಸ್ವಲ್ಪ ವಿಸ್ಕಿಯನ್ನು ಹಾಕಿದರೆ ತನ್ನ ದುಃಖವನ್ನು ಮರೆಯಲು ಸಾಧ್ಯವಾದೀತೆನ್ನಿಸಿತು. ಜೇಬಿನಲ್ಲಿ ಹೇಗಾದರೂ ನೋಟುಗಳಿದ್ದವು ಗಡಿಯಾರ ನೋಡಿದ. ಎರಡೂವರೆ. ಒಂದೆರಡು ವಿಸ್ಕಿ ಹಾಕಿ ಮೂರೂವರೆಯ ಹೊತ್ತಿಗೆ ಆಸ್ಪತ್ರೆಗೆ ಹೋಗಿಬಿಡಬಹುದು. 'ಸತ್ತ ಹೆಣಕ್ಕೆ ಕಾಲದ ಪರಿವೆ ಏನು?' ಎನ್ನುತ್ತ ಪಡಖಾನೆಗೆ ನುಗ್ಗಿದ.

ಎಲ್ಮೋ ವಿಸ್ಕಿ ಕುಡಿದು ಎಷ್ಟೋ ವರ್ಷಗಳಾಗಿದ್ದವು. ಹೊಟ್ಟೆಗೆ ಎರಡು ಹೊತ್ತು ಹಿಟ್ಟು ಹಾಕಲು ದುಡ್ಡಿಲ್ಲದೇ, ಭಾವವನ್ನು ಅವಲಂಬಿಸಿದ್ದವನಿಗೆ ವಿಸ್ಕಿಗೆ ದುಡ್ಡೆಲ್ಲಿ ಬಂದೀತು? ಮೊದಲ ಗುಟುಕು ವಿಸ್ಕಿ ಆಪ್ಯಾಯಮಾನವಾಗಿತ್ತು. ಗುಟುಕಿನ ಮೇಲೆ ಗುಟುಕು ಕುಡಿಯುತ್ತ ತನ್ನ ಚಿಂತೆಯನ್ನೆಲ್ಲ ಮರೆತ. ತನ್ನ ಭಾವನ ಹಿಡಿತದಿಂದ ಪಾರಾದ ಈ ದಿನವನ್ನು ಹಬ್ಬದಿನದಂತೆ ಆಚರಿಸಬೇಕು ಎನ್ನುತ್ತ ಒಂದಾದರೊಂದಂತೆ ವಿಸ್ಕಿಯ ಸೇವನೆ ಮಾಡಿದ. ತನ್ನ ಜೇಬಿನಲ್ಲಿದ್ದ ದುಡ್ಡೆಲ್ಲ ಮುಗಿಯಿತು ಎಂದು ಅವನಿಗೆ ಗೊತ್ತಾದಾಗ ಸಂಜೆ ಐದು ಗಂಟೆ! ತೂರಾಡುತ್ತ ತನ್ನ (!) ಕಾರಿನ ಕಡೆ ಹೊರಟ.

ಎಲ್ಮೋ ಆಸ್ಪತ್ರೆ ಸೇರಿ ನೇರವಾಗಿ (?) ನಾಲ್ಕು-ಸೌತ್ ವಾರ್ಡಿಗೆ ಹೋಗಿ ನರ್ಸುಗಳಿಗೆ, 'ನಾನು ಎಲ್ಮೋ. ಜೇಂಸ್ ಸ್ಮಿತ್‌ನ ಭಾವಮೈದ' ಎಂದ.

ನರ್ಸು ಚಾರ್ಟಿನಲ್ಲಿ ನೋಡಿ, 'ರೂಮ್ ನಂಬರು 427-ಬಿ' ಎಂದಳು.

ಎಲ್ಮೋ ರೂಮಿನ ಬಳಿಗೆ ಹೋದ. ಬಾಗಿಲು ಹಾಕಿತ್ತು. ಮೆತ್ತಗೆ ಬಾಗಿಲು ತೆಗೆದ. ಒಳಗೆ ನೋಡಿ ಹೌಹಾರಿದ! ಅವನ ಮೈ ಬೆವತಿತು. ಎದುರಿಗೆ ಹಾಸಿಗೆಯ ಮೇಲೆ ತನ್ನ ಮೃತ ಭಾವ ಎದ್ದು ಕುಳಿತಿದ್ದಾನೆ. ಎಲ್ಮೋವಿನ ತಲೆ ಗರ್ರನೆ ತಿರುಗಲಾರಂಭಿಸಿತು. ಇದೇನು ದೈವವೋ, ಭೂತವೋ, ಅಥವಾ ಮದ್ಯದ ಪ್ರಭಾವವೋ ಗೊತ್ತಾಗದೆ ಕಕ್ಕಾಬಿಕ್ಕಿಯಾದ.

ಎಲ್ಮೋವನ್ನು ನೋಡುತ್ತಲೇ ಅವನ ಭಾವ ಕೆರಳಿ ಕೆಂಗಣ್ಣು ಬಿಡುತ್ತ, 'ಎರಡೂವರೆಯೊಳಗೆ ಬಾ ಎಂದು ಹೇಳಿದರೆ, ಈಗ ಆರೂವರೆಗೆ ನಿನ್ನ ಮುಸುಡಿ ತೋರಿಸುತ್ತಿದ್ದೀಯಾ... ಸೂ...ನೇ?, ಮನೆಗೆ ಬಾ, ನಿನ್ನ ಛಮಡಾ ಸುಲಿದು ಹಾಕುತ್ತೇನೆ.' ಎಂದು ಘರ್ಜಿಸಿದ.

ಎಲ್ಮೋ ನಡುಗುತ್ತ, ತೊದಲುತ್ತ, 'ನೀ.... ಪು... ಇನ್ನೂ... ಬ.... ಬ... ಬದುಕಿದ್ದೀರಾ...?' ಎನ್ನುತ್ತಿದ್ದಂತೆ, ತಾನು ಭಾವನ ದುಡ್ಡು ತೆಗೆದುಕೊಂಡು ಪಡಖಾನೆಗೆ ಹೋದದ್ದು, ಅವನ ದುಡ್ಡಿನ ಪೆಟ್ಟಿಗೆಯನ್ನು ತನ್ನ ಹಾಸಿಗೆಯ ಕೆಳಗೆ ತಂದಿಟ್ಟಿದ್ದನ್ನು ನೆನಸಿಕೊಳ್ಳುತ್ತಿದ್ದಂತೆ ಅವನ ಕಣ್ಣು ಕತ್ತಲಿಟ್ಟಿತು. ಹೆದರಿಕೆಯಿಂದಲೋ, ಮದ್ಯದ ಪ್ರಭಾವದಿಂದಲೋ, ಗೊತ್ತಿಲ್ಲ, ಜ್ಞಾನ ತಪ್ಪಿ, ದಢಾರನೆ ನೆಲದ ಮೇಲೆ ಕುಸಿದು ಬಿದ್ದ.

ಇದನ್ನು ನೋಡಿದ ನರ್ಸೊಬ್ಬಳು ಕೂಡಲೆ, 'ಕೋಡ್ ಬ್ಲೂ-ರೂಂ 427' ಎಂದು ಘೋಷಿಸಿದಳು. ಕ್ಷಣಮಾತ್ರದಲ್ಲಿ ಆಸ್ಪತ್ರೆಯಲ್ಲಿದ್ದ ಡಾಕ್ಟರುಗಳು ನರ್ಸುಗಳೆಲ್ಲ ಅಲ್ಲಿಗೆ ನುಗ್ಗಿದರು. ಎಲ್ಮೋವನ್ನು ಎತ್ತಿ ಅಲ್ಲಿದ್ದ ಹಾಸಿಗೆಯ ಮೇಲೆ ಹಾಕಿ, ಅವನ ಮುಖಕ್ಕೆ ತಣ್ಣೀರು ಎರಚಿದರು. ಕಪಾಲಕ್ಕೆ ಹೊಡೆದರು, ಎದೆಗೆ ಗುದ್ದಿದರು. ಬಲವಾಗಿ ಇವನಿಗೊಂದು ಷಾಕ್ ಕೊಡೋಣವೆಂದು ಯೋಚಿಸುತ್ತಿರುವಲ್ಲಿ, ಎಲ್ಮೋ ನೋವಿನಿಂದ ತಟಕ್ಕನೆ ಎದ್ದು ಕೂತ! ಮದ್ಯದ ಮದ ಇಳಿದು ಸುತ್ತಮುತ್ತಲ ತಿಳುವಳಿಕೆ ಬಂತು. ಅವನು ಬದುಕಿದ್ದಾನೆ ಎಂದು ತಿಳಿದು ಡಾಕ್ಟರುಗಳಿಗೆ ಬಹಳ ನಿರಾಶೆಯಾಯಿತು. 'ಸತ್ತಿದ್ದರೆ, ಬದುಕಿಸಬಹುದಾಗಿತ್ತಲ್ಲಾ, ಈಗ ಆ ಅವಕಾಶವಿಲ್ಲವಲ್ಲಾ' ಎಂದುಕೊಳ್ಳುತ್ತಾ

ಡಾಕ್ಟರುಗಳು ಒಬ್ಬೊಬ್ಬರಾಗಿ ಆ ರೂಮನ್ನು ಬಿಟ್ಟು ಹೊಟರು. ಭಾವನ ಡಾಕ್ಟರೇ ಎಲ್ಮೋವನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿ, 'ಈ ಸಂಜೆ ಇಬ್ಬರೂ ಇಲ್ಲೇ ಇರಿ. ನಾಳೆ ಬೆಳಿಗ್ಗೆ ಡಿಸ್ಚಾರ್ಜ್ ಮಾಡುತ್ತೇನೆ' ಎಂದರು. ಈ ರಂಪದಿಂದ ಆ ರೂಮು ಕುರುಕ್ಷೇತ್ರ ರಣರಂಗದಂತಾಗಿತ್ತು. ಪಾಪ, ಆ ರೂಮನ್ನು ಅಚ್ಚುಕಟ್ಟು ಮಾಡುವ ಕೆಲಸ ನರ್ಸುಗಳದದು ತಾನೆ. ಹೆಡ್ ನರ್ಸಿನ ಉಸ್ತುವಾರಿಯಲ್ಲಿ ಇನ್ನಿಬ್ಬರು ನರ್ಸುಗಳು ರೂಮನ್ನು ಶುಚಿಪಡಿಸತೊಡಗಿದರು.

''ಒಂದೇ ದಿನದಲ್ಲಿ ಎರಡು 'ಕೋಡ್ ಬ್ಲೂ' ಎಂದರೆ ಮೈ ಮುರಿಯುವಷ್ಟು ಕೆಲಸ.'' ಎಂದಳು ಹೆಡ್ ನರ್ಸ್.

'ಇವತ್ತು ಇನ್ನೊಂದು ಕೋಡ್ ಬ್ಲೂ ಆಯಿತೆ?' ಎಂದು ಕೇಳಿದಳು ಆಗತಾನೆ ಡ್ಯೂಟಿಯ ಮೇಲೆ ಬಂದಿದ್ದ ಇನ್ನೊಬ್ಬಳು ನರ್ಸ್.

'ಹೌದು. ಬೆಳಿಗ್ಗೆ. ರೂಮ್ 420 ರಲ್ಲಿ, ಡಾಕ್ಟರ್ ಸ್ವಾಮಿಯವರ ಪೇಷಂಟ್ ಜೇಂಸ್ ಸ್ಮಿತ್, ಸತ್ತುಹೋದ. ಎಷ್ಟು ಕಷ್ಟಪಟ್ಟರೂ ಉಳಿಸಲಾಗಲಿಲ್ಲ.' ಎಂದಳು ಹೆಡ್ ನರ್ಸ್.

'ಅಂದಹಾಗೆ, ಅವನ ಮನೆಯವರು ಯಾರೂ ಇನ್ನೂ ಬಂದಿಲ್ಲ. ಶವಾಗಾರಕ್ಕೆ ಶವವನ್ನು ಕಳಿಸಲು ಇನ್ನೂ ಅನುಮತಿ ಸಿಕ್ಕಿಲ್ಲ.' ಎಂದಳು ಇನ್ನೊಬ್ಬ ನರ್ಸ್.

'ಓ.... ಹಾಗೇನು? ಈ ಕೆಲಸ ಮುಗಿದ ಮೇಲೆ ಅವನ ಮನೆಗೆ ಪುನಃ ಟೆಲಿಫೋನು ಮಾಡಬೇಕು'' ಎಂದಳು ಹೆಡ್ ನರ್ಸ್.

'ಜೇಂಸ್ ಸ್ಮಿತ್' ಎಂಬ ಹೆಸರು ಕೇಳಿ ಎಲ್ಮೋವಿನ ಕಿವಿ ನಿಮಿರಿತು. ಅರೆ, ಅದು ತನ್ನ ಭಾವನ ಹೆಸರೇ ಅಲ್ಲವೇ? ಆ ಹೆಸರ ಇನ್ನೊಬ್ಬ ಬೆಳಗ್ಗೆ ಸತ್ತನೆ? ಹಾಗಾದರೆ ತನ್ನ ಭಾವ ಸಾಯಲೇ ಇಲ್ಲ! ಆಸ್ಪತ್ರೆ ತನ್ನನ್ನು ಕರೆದು 'ಜೇಂಸ್ ಸ್ಮಿತ್ ಸತ್ತು ಹೋದ, ಎಂದು ಸುದ್ದಿ ಕೊಟ್ಟದ್ದು ನರ್ಸ್ ಮಾಡಿದ ತಪ್ಪಿಂದ.' ಎಲ್ಮೋ ಭಾವನ ಕಡೆ ನೋಡಿ ಕಣ್ಣು ಮಿಟುಕಿಸಿದ. ಜೇಂಸ್ ಸ್ಮಿತ್‌ಗೆ ಅರ್ಥವಾಗಲಿಲ್ಲ.

ಆ ಸಂಜೆ ನರ್ಸುಗಳೆಲ್ಲ ಸೇರಿ ಜಟಿಲವಾದ ಸಮಸ್ಯೆಯನ್ನು ಬಗೆಹರಿಸಿದ್ದರು. ಆ ಆಸ್ಪತ್ರೆಯಲ್ಲಿದ್ದವರು ಇಬ್ಬರು ಜೇಂಸ್ ಸ್ಮಿತ್‌ಗಳು. ರೂಮ್ 420ರ ಜೇಂಸ್ ಸ್ಮಿತ್ ತೀರಿಕೊಂಡಿದ್ದ. ಅನನುಭವಿ ಪ್ರಾಕ್ಟಿಕಲ್ ನರ್ಸ್ ರೂಮ್ 427ರ ಜೇಂಸ್ ಸ್ಮಿತ್‌ನ ಮನೆಗೆ ಟೆಲಿಫೋನು ಮಾಡಿ ಎಲ್ಮೋವಿನ ಜೊತೆ ಮಾತನಾಡಿದ್ದಳು.

ಆರು ತಿಂಗಳ ನಂತರ ಆಸ್ಪತ್ರೆಗೆ ಎಲ್ಮೋವಿನ ಲಾಯರುಗಳಿಂದ ಒಂದು ಕಾಗದ ಬಂತು. ಅದರ ಒಕ್ಕಣೆ ಇಷ್ಟು: 'ನಿಮ್ಮ ಆಸ್ಪತ್ರೆ ನಮ್ಮ ಕಕ್ಷಿಗಾರ ಜೇಂಸ್ ಸ್ಮಿತ್ ಸತ್ತನೆಂದು ಸುಳ್ಳು ಸುದ್ದಿಯನ್ನು ಕೊಟ್ಟಿದುದರಿಂದ, ಅವರ ನೆಚ್ಚಿನ ಭಾವಮೈದುನ ಎಲ್ಮೋ ಡೀನ್ ಅವರ ಮನಸ್ಸಿಗೆ ಅತ್ಯಂತವಾಗಿ ಖೇದವಾಗಿ, ಹೃದಯಾಘಾತವಾಗಿ ನಿಮ್ಮ ಆಸ್ಪತ್ರೆಯಲ್ಲೇ ಕೋಡ್ ಬ್ಲೂ ಪ್ರೊಸೀಜರಿನಿಂದ ಅವನ ಜೀವನುಳಿಸಬೇಕಾದ ಪ್ರಕರಣ ನಿಮಗೆಲ್ಲ ಗೊತ್ತೇ ಇದೆ. ಎಲ್ಮೋ ಅವರಿಗೆ ಹಿಂದೆ ಎಂದೂ ಇಂತಹ ತೊಂದರೆ ಇಲ್ಲದಿದ್ದುದರಿಂದ

ಅವರ ಹೃದಯಾಘಾತಕ್ಕೆ ನಿಮ್ಮ ಆಸ್ಪತ್ರೆಯಲ್ಲಿ ನಡೆದ ಪ್ರಮಾದವೇ ಕಾರಣ ಎಂಬ ನಿರ್ಧಾರಕ್ಕೆ ಬರಲೇಬೇಕಾಗಿದೆ. ಆದ ಕಾರಣ ನಿಮ್ಮ ಆಸ್ಪತ್ರೆಯ ಮೇಲೆ ದಾವ ಹಾಕಲು ನಮಗೆ ನಮ್ಮ ಕಕ್ಷಿದಾರರು ಅನುಮತಿ ಕೊಟ್ಟಿದ್ದಾರೆ. ಈ ಬಗ್ಗೆ ನಿಮ್ಮೊಡನೆ ಮಾತನಾಡಲು ನಾವು ಸಿದ್ಧ...' ಇತ್ಯಾದಿ.


ಆಸ್ಪತ್ರೆ ಕೋರ್ಟಿಗೆ ಹೋಗಲು ಇಷ್ಟಪಡದೆ ಕೋರ್ಟಿನಾಚೆ ವಿವಾದವನ್ನು ಇತ್ಯರ್ಥ ಮಾಡಿಕೊಂಡಿತು. ಎಷ್ಟು ದುಡ್ಡು ಕೊಟ್ಟರು ಎನ್ನುವ ವಿಷಯವನ್ನು ಗೋಪ್ಯವಾಗಿಟ್ಟಿದ್ದರು.

ಕೆಲವೇ ದಿನಗಳಲ್ಲಿ ಎಲ್ಮೋ ತನ್ನದೇ ಆದ ಹೊಸ ಕಾರಲ್ಲಿ ಊರಲ್ಲೆಲ್ಲ ಓಡಾಡುತ್ತಿದ್ದ. ಭಾವ ಜೇಂಸ್ ಸ್ಮಿತ್ ಮತ್ತು ಎಲ್ಮೋ ಎಂಬ ಅನ್ಯೋನ್ಯವಾಗಿರುವುದನ್ನು ಎಲ್ಲರೂ ಗಮನಿಸಿದರು. ಆ ನಂತರ ಜೇಂಸ್ ಸ್ಮಿತ್, 'ನಿನ್ನ ಚಮಡಾ ಸುಲಿದು ಹಾಕುತ್ತೇನೆ ನೋಡು' ಎಂದು ಎಲ್ಮೋವನ್ನು ಉದ್ದೇಶಿಸಿ ಹೇಳಿದ್ದನ್ನು ಯಾರೂ ಕೇಳಲಿಲ್ಲ. ಎಲ್ಮೋ ನೌಕರಿಗೆ ಸೇರಿದ್ದನ್ನು ಯಾರೂ ನೋಡಲಿಲ್ಲ.

ಒಂದೇ ಹೆಸರಿನ ಇಬ್ಬರು ಆಸ್ಪತ್ರೆಯಲ್ಲಿದ್ದರೆ ಇಬ್ಬರ ಚಾರ್ಟ್‌ರ ಮೇಲೂ "Name Alert' (ಇದೇ ಹೆಸರಿನ ಅಥವಾ ಇದೇ ಹೆಸರಿನಂತಿರುವ ಇನ್ನೊಬ್ಬ ಈ ಆಸ್ಪತ್ರೆಯಲ್ಲಿದ್ದಾನೆ. ಎಚ್ಚರಿಕೆ!) ಎಂಬ ದೊಡ್ಡ ಕೆಂಪು ಎಚ್ಚರಿಕೆಯ ಲೇಬಲ್ ಒಂದನ್ನು ಆ ಎರಡು ಪೇಷಂಟುಗಳ ಚಾರ್ಟಿನ ಮೇಲೂ ಅಂಟಿಸುವ ಪದ್ಧತಿಯನ್ನು ಆಸ್ಪತ್ರೆ ಜಾರಿಗೆ ತಂದಿತು.

★★★

ವಿರೋಧ ಪಕ್ಷದವರ ಮಾತು ಕೇಳಿದ್ರೆ ಉದ್ಧಾರ ಆಗೋಲ್ಲ
ಕವಡೆ ಕಾಸಿನ ಬೆಲೆಯನ್ನು ಕೊಡುವುದು ಬೇಡ ಎಂಬ ಅಭಿಪ್ರಾಯಕ್ಕೆ ಬಂದ ನಂತರ
ನಮ್ಮ ಪಕ್ಷವನ್ನು ಸಬಲವಾಗಿ ಮಾಡಲು ಸಾಧ್ಯವಾಯಿತು.....



ಈಚಲ ಪೊರಕೆಯೊಂದಿಗೆ ಬಂದ ಯಜಮಾನಿಕೆ

- ಧೃತಿ

ಅಂಗಡಿ ಹುಡುಗ ಸಾಮಾನು ತಂದುಕೊಟ್ಟ ಮೇಲೆ, ಅವನ್ನು ಎಣಿಸಿ ನೋಡಿದೆ. ಒಂದು ಸಾಮಾನು ಬಿಟ್ಟುಹೋಗಿದೆ. ಯಾವುದೆಂದು ನೋಡಿದರೆ ಯಥಾಪ್ರಕಾರ ಅದು ಕಡ್ಡಿಪೊರಕೆಯೇ. (ಅಥವಾ ಈಚಲ ಪೊರಕೆ) ಅವನು ಅದನ್ನು ತರುವುದಿಲ್ಲವೆಂದು ಗೊತ್ತಿದ್ದರೂ ಕೇಳಿದೆ. 'ಏಕೆ ತರಲಿಲ್ಲ?' ಎಂದ. 'ಸ್ಟಾಕ್ ಇರಲಿಲ್ಲ' ಎಂದ ಆ ಹುಡುಗ. 'ನೆನ್ನೆ ನಾನು ನೋಡಿದಾಗ ಸ್ಟಾಕ್ ಇತ್ತಲ್ಲ' ಎಂದೆ. 'ಇಲ್ಲ ಮೇಡಂ ಮುಗಿದು ಹೋಗಿದೆ' ಎಂದ. ಈ ಉತ್ತರದಿಂದ ನನಗಾವ ಬೇಸರವೂ ಆಗಲಿಲ್ಲವೆನ್ನಿ. ಏಕೆಂದರೆ ಹಲವು ವರ್ಷಗಳಿಂದ ಇದೇ ಉತ್ತರದ ರಾಗವನ್ನು ಕೇಳಿಕೇಳಿ ನನಗೆ ಅಭ್ಯಾಸವಾಗಿ ಹೋಗಿದೆ. ಇದು ನನ್ನೊಬ್ಬಳದ್ದೇ ಅನುಭವವೋ ಅಥವಾ ಎಲ್ಲ ಹೆಂಗಸರೂ ಅನುಭವಿಸಿದ್ದಾರೋ ಅದು ನನಗೆ ಗೊತ್ತಿಲ್ಲ. ಅಂಗಡಿ ಹುಡುಗ ಕಡ್ಡಿ ಪೊರಕೆ ತಂದುಕೊಡುವುದಿಲ್ಲವೆಂದು ತಿಳಿದಿದ್ದರೂ ಅವನನ್ನು ಕೇಳಿದ್ದೇಕೆ ಎಂದು ಕೆಣಕಬೇಡಿ. ಹಾಳು ಮರೆವು ಎಂಬುದೊಂದು ಇರುತ್ತದಲ್ಲ, ಜೊತೆಗೆ ಕಡ್ಡಿಪೊರಕೆ ಬೇಕಾಗುವುದು ವರ್ಷಕ್ಕೊ ಅಥವಾ ಆರು ತಿಂಗಳಿಗೆ ಒಮ್ಮೆಯೋ ಏನೋ; ಮನೆಯ ಮುಂದೆ ಯಾರಾದರೂ ಮಾರಿಕೊಂಡು ಬದರೆ ಒಟ್ಟಿಗೇ ನಾಲ್ಕೈದು ಕೊಳ್ಳುತ್ತೇನೆ. ಅಥವಾ ಮನೆಯಿಂದ ಮನೆ, ಊರಿಂದ ಊರು ಬದಲಾಯಿಸುವಾಗ ಮನೆ ಶುಭ್ರಮಾಡಲು ಗೊತ್ತುಮಾಡಿದ ಕೆಲಸಗಾರರು ಒಟ್ಟಿಗೇ ಒಂದಷ್ಟು ಕಡ್ಡಿ ಪೊರಕೆಗಳನ್ನು ಬಿಟ್ಟು ಹೋಗಿರುತ್ತಾರೆ. ಅಥವಾ ತೀರಾ ಅಪರೂಪವಾಗಿ ಕಡ್ಡಿ ಪೊರಕೆಯ ಕಟ್ಟನ್ನೇ ನನ್ನ ಗಂಡ ತಂದಿರುವುದೂ ಉಂಟು. ಇಂಥ ಸಂದರ್ಭಗಳನ್ನು ಹೊರತುಪಡಿಸಿ ಉಳಿದಂತೆ ಕಡ್ಡಿ ಪೊರಕೆ ತರುವ ಕೆಲಸ ನನ್ನದೇ ಆಗಿರುತ್ತದೆ. ಈ ಮಧ್ಯೆ ಅಂಗಡಿ ಹುಡುಗ ಕಡ್ಡಿ ಪೊರಕೆ ತಂದು ಕೊಡುವುದಿಲ್ಲವೆಂಬ ವಿಷಯ ಮರತೇ ಹೋಗಿರುತ್ತದೆ. ಹೀಗಾಗಿ ಸಾಮಾನು ಬರೆಯುವ ಪಟ್ಟಿಯಲ್ಲಿ ಅದನ್ನೂ ಸೇರಿಸಿಬಿಟ್ಟಿರುತ್ತೇನೆ. ಯಥಾ ಪ್ರಕಾರ ಅಂಗಡಿ ಹುಡುಗ ಯಾವುದಾದರೂ ಸಬೂಬು ನೀಡಿ ಅದನ್ನು ತರದೇ ಬಿಟ್ಟು ಬಂದಿರುತ್ತಾನೆ. ಮೊದ ಮೊದಲು ಸಾಮಾನು ತರುವ ಹುಡುಗ ನೀಡುವ ಎಲ್ಲ ಸಬೂಬುಗಳನ್ನು ನಾನು ನಂಬುತ್ತಾ ಇದ್ದೆ. ಅಂತೂ ಇದೊಂದು ಸಾಮಾನನ್ನು ನಾನೇ ಹೊತ್ತು ತರಬೇಕು ಎಂಬುದು ಗಮನಕ್ಕೆ ಬಂದ ಮೇಲೆ, ಯಾವ ಅಂಗಡಿ ಹುಡುಗರೂ ಅದನ್ನು ತಂದುಕೊಡುವುದಿಲ್ಲವೆಂಬ ಅರಿವಾಯಿತು. ಒಮ್ಮೆ ಅಂಗಡಿಯ ಮಾಲೀಕನನ್ನೇ ನೇರವಾಗಿ ಪ್ರಶ್ನಿಸಿದೆ. ಅವನು ಹುಡುಗನನ್ನು ಕೇಳಿದಂತೆ ನಟಿಸಿ 'ಮರೆತುಬಿಟ್ಟನಂತೆ ಮೇಡಂ' ಎಂದ. ಸಾಮಾನಿನ ಪಟ್ಟಿಯಲ್ಲಿ ಬರೆದಿರೋವಾಗ ಅದ್ಹೇಗೆ ಮರೆಯುತ್ತೆ? ಎಂದೆ. ಅವನು ಸುಮ್ಮನಿದ್ದ. 'ನೀವೇ ಏಕೆ ಕಳಿಸೋದಿಲ್ಲ?' ಎಂದೆ. 'ಹುಡುಗರಿಗೆ ಅದನ್ನು ತರಲು ಅವಮಾನವಂತೆ' ಎಂದ. ನಮ್ಮ ಸಂಭಾಷಣೆಯನ್ನು ಕೇಳುತ್ತಿದ್ದ ಆ ಹುಡುಗ ಅದನ್ನು ಗಂಡಸರು ಮುಟ್ಟಬಾರದು ಎಂದ. 'ಸರಿಯಾಗಿ ಪೇಪರ್‌ನಲ್ಲಿ ಪ್ಯಾಕ್ ಮಾಡಿ ಕಳಿಸಿ' ಎಂದು ಜೋರು ಮಾಡಿದೆ. ಹಾಗೆ ಜಬ್ಬರಿಸಿದ್ದಕ್ಕೆ ಅದೊಂದು ಬಾರಿ ಮಾತ್ರ ಕಡ್ಡಿ ಪೊರಕೆ ಉಳಿದ ಸಾಮಾನಿನೊಂದಿಗೆ ಮನೆಗೆ ಬಂತು. ಮುಂದಿನ ಬಾರಿ ಯಥಾ ಪ್ರಕಾರ ಅದೇ ರಾಗ.

ಇತ್ತೀಚೆಗೆ ಪ್ಲಾಸ್ಟಿಕ್ ಪೊರಕೆ ಬಳಕೆಗೆ ಬಂತಲ್ಲ, ಆಗ ನಾನೂ ಸಂತೋಷಗೊಂಡಿದ್ದೆ. ಏಕೆಂದರೆ ನೋಡಲೂ ಅಂದವಾಗಿದ್ದವು; ಜೊತೆಗೆ ಎರಡೇ ದಿನಕ್ಕೆ ಕಟ್ಟು ಹರಿದು ಸ್ವತಂತ್ರವಾಗಿ ಅಡ್ಡಾದಿಡ್ಡಿಯಾಗಿ ಬೀಳುವ ಕಡ್ಡಿ ಪೊರಕೆಗಿಂತ ಉತ್ತಮ ಎನಿಸಿದ್ದರಿಂದ. ಆದರೆ ಕೂಡಲೇ ಅರ್ಥವಾಯಿತು - ಕಡ್ಡಿ ಪೊರಕೆಯಿಂದಾಗುವಷ್ಟು ಶುದ್ಧಿ ಪ್ಲಾಸ್ಟಿಕ್ ಪೊರಕೆಯಿಂದ ಆಗುವುದಿಲ್ಲ ಎಂಬುದು. ಅಂತೂ ಕಡ್ಡಿಪೊರಕೆಯ ಅಗತ್ಯವನ್ನು ನಿವಾರಿಸುವುದಕ್ಕಾಗಲಿಲ್ಲ.

ಇದನ್ನೆಲ್ಲಾ ಏಕೆ ಬರೆಯುತ್ತಿದ್ದೇನೆಂದರೆ ಆಕಸ್ಮಿಕವಾಗಿ ನಮ್ಮ ಮದುವೆಯ ದಿನಾಂಕದಂದು ಅಂಗಡಿಗೆ ಸಾಮಾನುಗಳ ಪಟ್ಟಿಯನ್ನು ಕೊಡಲು ಹೋಗಬೇಕಾಗಿ ಬಂತು. ಸಾಮಾನಿನ ಪಟ್ಟಿಯನ್ನು ಅಂಗಡಿಯಾತನಿಗೆ ಕೊಟ್ಟು, ಕಡ್ಡಿ ಪೊರಕೆಯನ್ನು ಪ್ಯಾಕ್ ಮಾಡಿಸಿ ನಾನೇ ಕೈಲಿ ಹಿಡಿದು ಬರುತ್ತಿದ್ದೆ. ಎದುರಿಗೆ ಸಿಕ್ಕ ಪರಿಚಿತರೊಬ್ಬರು ನನ್ನತ್ತ ನೋಡಿ ಮುಗುಳ್ನಕ್ಕು ಮುಂದೆ ನಡೆದರು. ಅವರ ನಗು ಮೂವತ್ತೆಂಟು ವರ್ಷಗಳ ಹಿಂದಿನ ಘಟನೆಯನ್ನು ಥಕ್ಕನೆ ನೆನಪಿಗೆ ಬರುವಂತೆ ಮಾಡಿತು. ಮನಸ್ಸು ಹಳೆಯ ನೆನಪಿಗೆ ಸರಿಯಿತು. ನಾನು ಆಗಷ್ಟೇ ಮದುವೆಯಾಗಿ ಗಂಡನ ಮನೆಗೆ ಬಂದಿದ್ದೆ. ಬಂದು ಸುಮಾರು ಒಂದು ತಿಂಗಳಾಗಿದ್ದಿರಬಹುದು. ನಮ್ಮ ಮನೆಯಲ್ಲಿ ನನ್ನ ಅತ್ತೆಯವರಲ್ಲದೆ ಅವರ ಒಬ್ಬ ಚಿಕ್ಕ ಮೊಮ್ಮಗಳೂ ಇದ್ದಳು ಸುಮಾರು ಹದಿನೈದು, ಹದಿನಾರರ ಹರೆಯದವಳು. ಯಾವುದಾದರೂ ಸಣ್ಣ ಪುಟ್ಟ ಕೆಲಸವಿದ್ದರೆ ನಮ್ಮ ಅತ್ತೆಯವರು ಅವಳಿಗೆ ಮಾಡಿಕೊಡಲು ಹೇಳುತ್ತಿದ್ದರು. ಹೊಸದಾಗಿ ಬಂದಿದ್ದ ನನಗೆ ಅವರೆಲ್ಲರ ಮಾತುಕತೆಗಳ ಇಂಗಿತ ಅಷ್ಟಾಗಿ ಅರ್ಥವಾಗುತ್ತಿರಲಿಲ್ಲ. ಹೇಗೋ ಅವರೆಲ್ಲರೊಡನೆ ಸಹಕರಿಸಿ ಬಾಳುತ್ತಿದ್ದೆ. ಒಂದು ದಿನ ನಮ್ಮ ಅತ್ತೆಯವರು ಮೊಮ್ಮಗಳಿಗೆ ಹೇಳಿದರು. 'ಕಡ್ಡಿಪೊರಕೆ ಹಾಳಾಗಿದೆ, ಅಂಗಡಿಗೆ ಹೋಗಿ ತಗೊಂಡ್ಬಾ' ಎಂದು ಮೊಮ್ಮಗಳು ಏನೋ ಗೊಣಗಿಕೊಂಡಳು. ನನಗೆ ಅರ್ಥವಾಗಲಿಲ್ಲ. ನನ್ನ ಗಂಡ ಆಫೀಸಿಗೆ ಹೊರಟ ನಂತರ ಆ ಹುಡುಗಿ ನನ್ನ ಬಳಿ ಬಂದು, 'ಇನ್ನು ಮನೆಗೆ ನೀವೇ ಯಜಮಾನಿ ಅಲ್ಲವೇನ್ರಿ. ಮನೆಗೆ ಯಾವ ಸಾಮಾನು ಸರಂಜಾಮು ಬೇಕು ಎನ್ನೋದನ್ನ ನೀವೇ ನೋಡ್ಕೋಬೇಕು ಅಲ್ವ' ಎಂದಳು. ಆ ಮಾತಿನ ವರಸೆಯಿಂದ ಮೊದಲು ನನಗೆ ಸ್ವಲ್ಪ ಭಯವಾಯಿತು. ನನ್ನಿಂದ ಯಾವುದಾದರೂ ಅಚಾತುರ್ಯ ನನಗೇ ಅರಿವಿಲ್ಲದಂತೆ ಸಂಭವಿಸಿ, ವ್ಯಂಗ್ಯವಾಗಿ ನನ್ನನ್ನು ಹೀಗಳೆಯುತ್ತಿದ್ದಾಳೋ ಅಥವಾ ಅತ್ತೆಯವರೇ ಹಾಗೆ ಹೇಳುವಂತೆ ಹೇಳಿಕೊಟ್ಟರೋ ಅರ್ಥವಾಗದೆ ತಬ್ಬಿಬ್ಬಾದೆ.

''ಮದುವೆಯಾಗಿ ಬಂದ್ಮೇಲೆ ನೀವೇ ಈ ಮನೆಗೆ ಯಜಮಾನಿ. ನೀವೇ ಎಲ್ಲಾ ನೋಡ್ಕೋಬೇಕು'' ಎಂದಳು. ಅಷ್ಟರಲ್ಲಿ ನಾನು ಸಾವರಿಸಿಕೊಂಡಿದೆ. ಇದರಲ್ಲಿ ವ್ಯಂಗ್ಯವೇನಿಲ್ಲ, ಯಾವುದೋ ಜವಾಬ್ದಾರಿ ಹೊರಿಸುತ್ತಿದ್ದಾಳೆ ಅನ್ನಿಸಿತು. ಇದುವರೆಗೂ ಯಾರೂ ನನ್ನನ್ನು ಯಜಮಾನಿ ಎಂದು ಕರೆದಿರಲಿಲ್ಲ. ಮನೆಯಲ್ಲಿ ಅತ್ತೆಯವರಿರುವಾಗ, ನಾನಾಗಿಯೇ ನಾನು ಅಂತಹ ಪಟ್ಟವನ್ನು ಮನದಲ್ಲಾಗಲೀ ಯೋಚಿಸಿರಲಿಲ್ಲ. ಈ ಹುಡುಗಿ ಯಜಮಾನಿ ಪಟ್ಟ ಕಟ್ಟಿದ್ದಾಳಲ್ಲ. ಅನೊಂದು ರೀತಿಯ ಗೌರವ ಅನ್ನಿಸಿತು. ಸಂತೋಷವೂ ಆಯಿತು.

''ಏನು ಮಾಡ್ಬೇಕಿತ್ತು? ಏನಾದರೂ ಹೇಳಿದರೆ ಮಾಡ್ತೀನಿ ನನಗಾಗೇ ಏನೂ ತೋಚುವುದಿಲ್ಲ'' ಎಂದೆ.

'ಅಜ್ಜಿ ಕಡ್ಡಿಪೊರಕೆ ಬೇಕು ಅಂತ ಹೇಳ್ತಿದ್ರು' ಎಂದಳು. ನನಗೆ ಮದುವೆ ಮುನ್ನ ಮನೆಗೆ ಸಾಮಾನು ತಂದು ಅಭ್ಯಾಸವಿಲ್ಲ. ನನ್ನ ತವರಿನಲ್ಲಿ ಹೆಂಗಸರನ್ನು ಸಾಮಾನು ತರಲು ಕಳಿಸುತ್ತಿರಲಿಲ್ಲ. ಜೊತೆಗೆ ಒಡಹುಟ್ಟಿದವರೆಲ್ಲರೂ ಸೋದರರೇ ಆದುದರಿಂದ ಸಾಮಾನು ತರುವ ಕೆಲಸ ಹೆಂಗಸರ ಮೇಲೆ ಬೀಳುತ್ತಲೂ ಇರಲಿಲ್ಲ. ಆದರೂ ಈ ಹುಡುಗಿ ವಹಿಸಿದ ಕೆಲಸವನ್ನು ಈಗ ಮಾಡಬೇಕಿತ್ತು. ಆದರೆ ಇದರಿಂದ ನನಗೆ ಬೇಸರವೇನೂ ಆಗಲಿಲ್ಲ. ಯಜಮಾನಿ ಎಂದು ಅವಳು ಕರೆದದ್ದರಿಂದ ಹೊಸ ಹುರುಪು ಬೇರೆ. ನಾನು ಅವಳಿಗೆ ಹೇಳಿದೆ. 'ಆಗಲಮ್ಮ; ನಾನೇ ತರ್ತೀನಿ. ಕಡ್ಡಿ ಪೊರಕೆ ಎಂದರೆ ಮನೆ ಕಸ ಗುಡಿಸ್ತಾರಲ್ಲ ಅದು ತಾನೆ?' ಎಂದೆ. 'ಅದಲ್ರೀ; ಹಿತ್ತಿಲು ಗುಡಿಸೋದಿಲ್ವ ಅದು' ಎಂದಳು. 'ನನ್ನ ತವರಿನಲ್ಲಿ ಅದನ್ನು ಈಚಲು ಪೊರಕೆ ಅನ್ನಾರೆ, ಮನೆ ಕಸ ಗುಡಿಸೋದನ್ನ ಹಂಚಿಕಡ್ಡಿ ಪೊರಕೆ ಅಂತಾರೆ, ಅದಕ್ಕೇ ನನಗೆ ಗೊತ್ತಾಗಲಿಲ್ಲ' ಎಂದು ಹೇಳಿ ಅಂಗಡಿಗೆ ಹೋದೆ. ಅಂಗಡಿಯಾತ ಹೇಗೆ ಕೊಟ್ಟನೋ ಅದನ್ನು ಹಾಗೇ ಹಿಡಿದು ಮನೆಗೆ ತಂದೆ. ಕೆಳಗಿನ ಭಾಗವನ್ನು ಮೇಲೆ ಮಾಡಿ ಹಿಡಿದುಕೊಂಡು ಬರುವುದಕ್ಕಾಗಲಿ ಅಥವಾ ಪೇಪರ್‌ನಲ್ಲಿ ಸುತ್ತಿಸಿಕೊಂಡು ಬರಬೇಕೆಂಬುದಾಗಲೀ ನನಗೆ ಹೊಳೆಯಲೇ ಇಲ್ಲ. ದಾರಿಯುದ್ದಕ್ಕೂ ಹಾಗೆಯೇ ಹಿಡಿದುಕೊಂಡು ಬಂದೆ ಅನ್ನಿ. (ಈಗ ಯೋಚಿಸಿಕೊಂಡರೆ ನಾಚಿಕೆಯಾಗುತ್ತದೆ) ನಮ್ಮ ಮನೆಯನ್ನು ಸಮೀಪಿಸುತ್ತಿದ್ದಾಗ ನಮ್ಮ ಮನೆಯ ಬಳಿಯೇ ವಾಸವಿದ್ದ ನನ್ನ ಗೆಳತಿಯೊಬ್ಬಳು ನನ್ನನ್ನು ನೋಡಿ ಕಣ್ಣು ಅಗಲಿಸಿ ನಿಂತಳು. 'ಇದೇನೇ! ಮದುವೆಯಾದ್ಮೇಲೆ ಪ್ರಮೋಶನ್ನಾ' ಎಂದು ಉದ್ಗಾರ ತೆಗೆದಳು. ಅವಳ ತುಟಿಗಳಲ್ಲಿ ನಗುವಿತ್ತು. 'ಹುಂ. ಹೊಸ ಜವಾಬ್ದಾರಿ' ಎಂದು ಹೇಳಿ ಮುಂದೆ ನಡೆದೆ. ನಾನು ಪೊರಕೆ ಹಿಡಿದು ಬಂದ ರೀತಿಯನ್ನು ಕಂಡು ಆ ಚಿಕ್ಕ ಮೊಮ್ಮಗಳ ಮುಖ ಗಂಟಿಕ್ಕಿತು.

'ಹೀಗೇನ್ರಿ ತರೋದು? ಪ್ಯಾಕ್ ಮಾಡಿಸ್ಕೊಂಡು ತರೋಕಾಗ್ಲಿಲ್ವ' ಎಂದಳು. ನನ್ನನ್ನು ಮೆಚ್ಚುತ್ತಾಳೆ ಎಂದು ಭಾವಿಸಿದ್ದ ನನಗೆ ಮುಖ ಪೆಚ್ಚಾಯಿತು. ಅಡುಗೆ ಮನೆಯಿಂದ ಅವಳ ಧ್ವನಿ ಕೇಳಿಸಿಕೊಂಡ ಕೂಡಲೇ ನಮ್ಮತ್ತೆ ಹೊರಬಂದರು. ನನ್ನ ಕೈಲಿ ಪೊರಕೆ ಇದ್ದುದನ್ನೂ, ನಾನು ಅದರ ಬೆಲೆಯ ಬಗ್ಗೆ ಮಾತನಾಡುತ್ತಿದ್ದುದನ್ನೂ ಗಮನಿಸಿದ ಅವರು ಮೊಮ್ಮಗಳನ್ನು ಗದರಿಸಿಕೊಂಡರು. 'ಹೊಸದಾಗಿ ಮದುವೆಯಾಗಿ ಬಂದಿರೋಳನ್ನು ಪೊರಕೆ ತರೋಕೆ ಏಕೆ ಕಳಿಸ್ದೆ. ನೀನೇ ತರೋಕೆ ಏನಾಗಿತ್ತು' ಎಂದು ಗದರಿಕೊಂಡರು.

'ಹೋಗಲಿ ಬಿಡಿ, ನಾನೇ ತಂದರೂ ಏನಾಯ್ತೀಗ' ಎಂದು ಹೇಳಿ ಅವರನ್ನು ಪ್ರಸನ್ನಗೊಳಿಸಿದೆ. ಈಗ ಆ ಘಟನೆ ನೆನಪಿಗೆ ಬರುತ್ತಲೂ 'ಮದುವೆಯಾದ್ಮೇಲೆ ಪ್ರಮೋಷನ್ ಸಿಕ್ತಾ' ಎಂದ ಗೆಳತಿಯ ಹಾಸ್ಯದ ಮಾತು (ಆ ಮಾತಿನ ಹಿಂದಿನ ವಾಸ್ತವತೆ?) ಈಗಲೂ ನಗೆ ತರಿಸಿತು. ಜೊತೆಗೆ ನನಗೆ ಯಜಮಾನಿಯ ಪಟ್ಟಕಟ್ಟಿ ಕಡ್ಡಿಪೊರಕೆ ತರುವ ಕಷ್ಟದಿಂದ ಪಾರಾದ ಆ ಮೊಮ್ಮಗಳ ಜಾಣ್ಮೆಯೂ ನೆನಪಿಗೆ ಬಂದು ನಗೆಯುಕ್ಕಿತು. ಮನೆಗೆ ಬಂದಮೇಲೂ ನಗು ಅಳಿಸಿರಲಿಲ್ಲ.

''ಏಕೆ ನಗ್ತಿದೀಯ? ಏನಾಯಿತು?'' ಎಂದರು ನನ್ನ ಗಂಡ.

''ಏನಿಲ್ಲ... ಸುಮ್ಮನೆ... ಏನೋ ಜ್ಞಾಪಕಕ್ಕೆ ಬಂತು ಅಷ್ಟೆ'' ಎಂದೆ.

ತುಂತುರು

- ಕಾವ್ಯೇಷು ರಮ್ಯಂ ಚುಟುಕಂ?
- ಸೆರೆಮನೆಯ ಕಿಟಕಿ ಆಚೆಯಿಂದ ನೋಡುವಾಗ ಕೆಲವರಿಗೆ ನಕ್ಷತ್ರಗಳು ಕಂಡರೆ ಕೆಲವರಿಗೆ ಸರಳುಗಳು ಮಾತ್ರ ಕಾಣುತ್ತದೆ.
- ಮಾನ ಸನ್ಮಾನ ಅವಮಾನ ಎಲ್ಲವೂ ನಮ್ಮ ಕೈ ಮೀರಿದ್ದು.
- Going with an empty mind is different from going with an open mind
- ಸಾಲದಿಂದ ಮುಕ್ತರಾಗುವುದು ತುಂಬಾ ಸುಲಭ: ಆದಷ್ಟು ಬೇಗ ಅದನ್ನು ತೀರಿಸುವುದು.
- ಮಮತಾ ಬ್ಯಾನರ್ಜಿ: a rebel without a pause
- ನೇಣಿಗೇರುವ ಮುನ್ನ ನಿನ್ನ ಕೊನೆಯ ಸಿಗರೇಟ್ ಸೇದು ಎಂದು ಕೊಟ್ಟಾಗ ಅವನು ಹೇಳಿದ್ದು: *ಛೆ! ಬೇಡ, ಧೂಮಪಾನ ಆರೋಗ್ಯಕ್ಕೆ ಹಾನಿಕರ.*
- Smile by all means. but when it comes to laughing remember that each guffaw discharges some 50 percent more CO2 than a normal exhalation
- ರಾಷ್ಟ್ರಪತಿಯವರು ಬ್ರಹ್ಮಚಾರಿಯಾಗಿರುವಾಗ ಉಪರಾಷ್ಟ್ರಪತಿಯವರ ಪತ್ನಿಯನ್ನು *ದೇಶದ ಪ್ರಥಮ ಮಹಿಳೆ* ಎಂದು ಕರೆಯಬಹುದೆ?
- ಕಲ್ಪವೃಕ್ಷದ ಹಣ್ಣು ತಿನಬೇಕೆಂದ್ರ ಅದರ ಕೆಳಗಾS ಕೂಡಬೇಕಲಾ..
- Be good to America, if not they will bring democracy to you!
- ಸಮಯವನ್ನೇ ಹಣ ಎಂದು ಭಾವಿಸಿದರೆ ಕುಮಾರಸ್ವಾಮಿಯನ್ನು ನಂಬುವಂತಿಲ್ಲ.
- ಹೊಸ ಟ್ರಾಫಿಕ್ ನಿಯಮ: ಪಶ್ಚಿಮ ಬಂಗಾಳದಲ್ಲಿ ಕಾಮ್ರೇಡ್‌ಗಳು ಬಲಕ್ಕೆ ತಿರುಗಿದರೆ ಅದು ಸರಿ. ಯಾರೇ ಬೇರೆಯವರು ಎಲ್ಲೇ ಬಲಕ್ಕೆ ತಿರುಗಿದರೂ ಅದು ತಪ್ಪು.
- What the obituaries say today is almost not certainly what they will say tomorrow.
- No matter what you do there always somebody who does not like it.
- He is a writer whose books will be read long after Shakespeare, Jane Austin, Dickens are forgotten. But not until then.

– ದಂನಆ

ಹುಣಿಸೆ ಹಣ್ಣು

– ನಾಚಿ

1967ರ ಮಾರ್ಚ್. ನಾನು ಭುವನೇಶ್ವರದಲ್ಲಿದ್ದೆ. ಬೆಳಿಗ್ಗೆ 7ಕ್ಕೇ ಶೇಷಾಚಲಪತಿ ಬಂದು ''ನಡಿ, ನಡಿ. ಹಾಟೊಗೆ (ಸಂತೆಗೆ) ಹೋಗೋಣ. ಹುಣಿಸೆಹಣ್ಣು ಬಂದಿದೆಯಂತೆ'' ಅಂದು, ನನ್ನನ್ನೂ ಎಳಕೊಂಡು ಹೋದ. ಸಂತೆಯಲ್ಲಿ ಪ್ರತಿ ವರ್ಷದಂತೆ, ಒಬ್ಬ ಒಂದು ಮೂಟೆ ಹುಣಿಸೆ ಹಣ್ಣು ತಂದು, ಕೇಜಿಗೆ 3 ರೂನಂತೆ ಮಾರುತ್ತಿದ್ದ. ನಾವು ಐದೈದು ಕೇಜಿ ತಗೊಂಡ ಮೇಲೆ ಶೇಷಾಚಲಪತಿ ''ಇಲ್ಲಿ ನೋಡು, ಎಷ್ಟು ಅಗ್ಗ! ಪಾಟ್ನದಲ್ಲಿ ಸಿಗೋದೇ ಇಲ್ಲವಂತೆ, ಸಾರು ರುಚಿಯಾಗೆ ಇರೊಲ್ಲ ಅಂತ ಭವಾನಿಶಂಕರ ಗೋಳಾಡಿದ ಇಲ್ಲಿಗೆ ಬಂದಾಗ. ಪಾಟ್ನಕ್ಕೆ ಹೋಗೋರು ಯಾರಾದರೂ ಸಿಕ್ಕಿದರೆ 50 ಕೆ.ಜಿ. ಕಳುಹಿಸಬಹುದು. ಬೇಕಾದಷ್ಟು ಜನ ತೊಗೋತಾರೆ'' ಅಂದ.

ಭವಾನಿ ಶಂಕರ ಯಾರು ಅಂತ ಕೇಳಿದೆ. ''ಅವನು ಪಾಟ್ನದಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್, ಹೋದವಾರ ನೀನು ಬಂದಿದ್ಯಲ್ಲಾ ನಮ್ಮ ಮನೆಗೆ, ಆಗ ಇದ್ದನಲ್ಲ ಅವನೇ. ಅಂದಹಾಗೆ.. ನೀನು ಯಾವುದೋ ಕೆಲಸಕ್ಕೆ ಡೆಲ್ಲಿಗೆ ಹೋಗ್ತೀಯಂತೆ ಹೌದಾ?'

'ಹೌದು. ನಾಳೆ ಬೆಳಿಗ್ಗೆ ಎಕ್ಸ್‌ಪ್ರೆಸ್‌ನಲ್ಲಿ ಹೋಗ್ತಿದೀನಿ' ಅಂದೆ.

''ಭೇಷ್! ಡೆಲ್ಲಿ ಎಕ್ಸ್‌ಪ್ರೆಸ್ ಪಾಟ್ನದಲ್ಲಿ 10 ನಿಮಿಷ ಇರತ್ತೆ. ನೀನು I ಕ್ಲಾಸ್‌ನಲ್ಲಿ ಹೋಗ್ತೀಯಲ್ಲ, ಲಗ್ಗೇಜ್ ಬೀಳೋದಿಲ್ಲ. ಇವತ್ತೆ ನಾನು ಭವಾನಿ ಶಂಕರ್‌ಗೆ ಫೋನ್ ಮಾಡ್ತೀನಿ, ಡೆಲ್ಲಿ ಎಕ್ಸ್‌ಪ್ರೆಸ್‌ನಲ್ಲಿ ನನ್ನ ಸ್ನೇಹಿತರ ಜತೆ ಹುಣಿಸೆ ಹಣ್ಣು ಕಳಿಸ್ತಿದೀನಿ, ಬಂದು ತೊಗೊ ಅಂತ. ಓಡಿ ಬರ್‍ತಾನೆ'' ಅಂದು ಹುಣಿಸೇ ಹಣ್ಣಿನ ಮೂಟೆಯನ್ನು (30 ಕೆ.ಜಿ.) 50 ರೂ. ಗೆ ವ್ಯಾಪಾರ ಮಾಡಿದ.

ಜೇಬಿನಲ್ಲಿ ತಡಕಾಡಿ ಶೇಷಾಚಲಪತಿ ''ದುಡ್ಡು ಸಾಲದು, ನೀನೇ ಹಾಕಿರು. ಪಾಟ್ನದಲ್ಲಿ ಭವಾನಿ ಶಂಕರನಿಂದ 50 ರೂ. ಅಲ್ಲದೆ ನೀನು ಕೊಡಬೇಕಾದ ಕೂಲಿಯೆಲ್ಲಾ ಸೇರಿಸಿ ವಸೂಲು ಮಾಡು'' ಅಂದು. ''ಹಾಗೇ ಆಗಲಿ. ಪಾಟ್ನದಲ್ಲಿರುವ ನಮ್ಮ ಕಡೆ ಜನರಿಗೆ ಅನುಕೂಲವಾದರೆ ಸಂತೋಷ'' ಅಂದು, ಹುಣಿಸೆ ಹಣ್ಣಿನ ಮೂಟೆ ಸಮೇತ ಮನೆಗೆ ಬಂದೆ.

ಮಾರನೆ ದಿನ ರೈಲಿನಲ್ಲಿ

ಮಾರನೇ ದಿನ ಬೆಳಿಗ್ಗೆ 9ಕ್ಕೆ ಸೈಕಲ್ ರಿಕ್ಷಾ ಬಂತು, ನಾನೂ I ಕ್ಲಾಸ್‌ಗೆ ತಕ್ಕಂತೆ ಟ್ರಿಮ್ ಆಗಿ ಡ್ರೆಸ್ ಮಾಡಿಕೊಂಡಿದ್ದೆ. ಸೂಟ್‌ಕೇಸ್ ತೊಗೊಂಡು 'ಬರ್‍ತೀನಿ' ಅಂತ ಹೇಳಿ ಹೊರಟಾಗ 'ಅಯ್ಯೋ! ಹುಣಿಸೇ ಹಣ್ಣೇ ಮರೆತರಲ್ಲಾ' ಅಂತ ಜ್ಞಾಪಿಸಿದಳು. ಕಪ್ಪು ಕಪ್ಪಾಗಿ ಇದ್ದಿಲು ಮೂಟೆಯಂತೆ ಇದ್ದ ಈ ಮೂಟೆಯನ್ನ I ಕ್ಲಾಸಿನಲ್ಲಿ ಹೇಗೆ ತೊಗೊಂಡು ಹೋಗುವುದು ಅಂತ ಮುಜುಗರವಾಯ್ತು. ವಿಧಿಯಿಲ್ಲದೇ ಅದನ್ನೂ ರಿಕ್ಷಾದಲ್ಲಿ

ಹಾಕಿಕೊಂಡು ಸ್ಟೇಷನ್‌ನಲ್ಲಿ ಕೂಲಿಕೊಟ್ಟು (5 ರೂ.) I ಕ್ಲಾಸ್ ಬೋಗಿಯಲ್ಲಿ ಹಾಕಿಸಿದೆ. ಬೇರೆಲ್ಲೂ ಇಡಲಿಕ್ಕಾಗದೆ ನನ್ನ ಮುಂದೆಯೇ ಕೆಳಗೆ ಇಟ್ಟುಕೊಂಡು ಕೂತೆ.

ಇಬ್ಬರು ಪ್ರಯಾಣಿಕರು ನನ್ನ ಬೋಗಿಗೇ ಬಂದರು. ಮೂಟೆಯನ್ನು ನೋಡಿ 'ಏ ಕ್ಯಾ ಹೈ?' ಅಂತ ಕೇಳಿದರು.

'ಹುಣಿಸೇ ಹಣ್ಣು'

'ಓಹೋ! ವ್ಯಾಪಾರಿಗಳೊ?'

'ಛೆ, ಛೆ! ನಾನು ವ್ಯಾಪಾರಿಯಲ್ಲ. ಕಾಲೇಜಿನಲ್ಲಿ ಅಧ್ಯಾಪಕ, ದೆಹಲಿಯಲ್ಲಿ ನಡೆಯುವ ಒಂದು ಮುಖ್ಯವಾದ ಸೆಮಿನಾರಿಗೆ ಕಾಲೇಜಿನವರು ಕಳುಹಿಸಿದ್ದಾರೆ.''

''ಮತ್ತೆ ಈ ಹುಣಿಸೇ ಹಣ್ಣು?''

''ಓ ಅದೇ? ಅದನ್ನ, ನನ್ನ ಸ್ನೇಹಿತರು ಪಾಟ್ನದಲ್ಲಿರುವ ಅವರ ಸ್ನೇಹಿತರಿಗೆ, ಕಳುಹಿಸುತ್ತಿದ್ದಾರೆ, ಪಾಟ್ನದಲ್ಲಿ ಅವರು ಬಂದು ಈ ಮೂಟೆಯನ್ನು ತೊಗೊಂಡು ಹೋಗ್ತಾರೆ.''

''ಓ! ಹಾಗಾದರೆ ಅವರು ಪಾಟ್ನದಲ್ಲಿ ವ್ಯಾಪಾರಿಗಳು ಅನ್ನಿ''

''ಛೆ, ಛೆ ! ಅಲ್ಲ. ಅವರು ಬಿಹಾರಿನಲ್ಲಿ ಉನ್ನತ ಅಧಿಕಾರಿಗಳು''

''ಮತ್ತೆ ಅವರಿಗ್ಯಾಕೆ ಇಷ್ಟೊಂದು ಹುಣಿಸೇ ಹಣ್ಣು?''

ಸರಿ. ಇನ್ನು ಬೇರೆ ವಿಧಿಯಿಲ್ಲದೆ ನಿಜವನ್ನು ಪೂರ್ತಿಯಾಗಿ ಹೇಳಿದ ಮೇಲೆ ಅವರು ಸುಮ್ಮನಾದರು.

ಮಿಡ್ನಾಪುರ ಬಂತು. ಅವರಿಬ್ಬರೂ ಇಳಿದರು. ಬೇರೆ ಮೂವರು ಹತ್ತಿದರು. ಮೂಟೆ ನೋಡಿ ''ಏ ಕ್ಯಾ ಹೈ?''ನಿಂದ ಷುರುವಾಗಿ ನಮ್ಮ ಕಡೆಯ ಸಾರಿನವರೆಗೂ ಹೇಳಿದ್ದಾಯ್ತು. ಈ ಉತ್ತರವನ್ನು ಇನ್ನೂ ಎಷ್ಟು ಜನಕ್ಕೆ ಹೇಳಬೇಕಪ್ಪ ಅಂತ ಗಾಬರಿಯಾಯ್ತು. ಪಾಟ್ನ ಬೇಗ ಬರಲಿ ದೇವರೇ, ನನಗೆ ''ಏ ಕ್ಯಾ ಹೈ?'' ನಿಂದ ಮುಕ್ತಿ ಸಿಗಲಿ ಅಂದುಕೊಂಡೆ.

ರೈಲು ಪಾಟ್ನದಲ್ಲಿ ನಿಂತ ಕೂಡಲೆ ಕೆಳಗಿಳಿದು, ಭವಾನಿ ಶಂಕರ್‌ಗಾಗಿ ಕಾದೆ. ಐದು ನಿಮಿಷಗಳು ರೈಲು ನಿಲ್ಲುವುದರಿಂದ ಧೈರ್ಯವಾಗಿದ್ದೆ. 3-4 ನಿಮಿಷಗಳಾದರೂ ಅವರು ಬರಲೇ ಇಲ್ಲ. ನಂತರ ರೈಲೂ ಹೊರಟಿತು, ಹುಣಿಸೇ ಹಣ್ಣು ನನಗೇ ಅಂಟಿಕೊಂಡಿತಲ್ಲಪ್ಪ ಈಗ ಏನು ಮಾಡೋದು ಅಂತ ನಾನೇ ವದ್ದಾಡ್ತಿದ್ದಾಗ, ಎದುರು ಪ್ರಯಾಣಿಕರು ಬೇರೆ ''ಏನ್ಮಾಡ್ತೀರಿ ಈಗ?'' ಅಂತ ಕೇಳಿದರು. ಡೆಲ್ಲಿನಲ್ಲಿ ಬೇಕಾದಷ್ಟು ಜನ ನಮ್ಮೂರಿನವರಿದ್ದಾರೆ. ಅವರಿಗೆ ಕೊಡ್ತೀನಿ ಅಂತ ಹೇಳಿ ಅವರನ್ನ ಸುಮ್ಮನಾಗಿಸಿದೆ. ಆದರೆ ಇದುವರೆಗೂ ಒಂದು ಪರೋಪಕಾರದ ಭಾವನೆಯಿದ್ದ ನನಗೆ, ಈ ಘೋರ ಸಮಸ್ಯೆಗೆಲ್ಲಾ ಕಾರಣನಾದ ಶೇಷಾಚಲಪತಿಯ ಮೇಲೆ ವಿಪರೀತ ಕೋಪ ಬಂತು. ವಾಪಸ್ ಹೋದ ಕೂಡಲೆ ಅವನನ್ನ ಸರಿಯಾಗಿ ತರಾಟೆ ತೊಗೊಬೇಕು ಅನ್ನುವ ಪ್ರತೀಕಾರ ಭಾವನೆ ಷುರುವಾಯ್ತು.

ದೆಲ್ಲಿಯ ಗೆಸ್ಟ್ ಹೌಸಿನಲ್ಲಿ:

ಸಾಯಂಕಾಲ 6.30ಕ್ಕೆ ಡೆಲ್ಲಿ ಬಂತು. ಟ್ಯಾಕ್ಸಿ ಓಡಿದು ಮಹೆರೌಲಿಯಲ್ಲಿರುವ ನಮ್ಮ ಗೆಸ್ಟ್ ಹೌಸ್ ತಲುಪಿ ರೂಮು ಸೇರುವ ಹೊತ್ತಿಗೆ 8 ಗಂಟೆಯಾಗಿತ್ತು. ಮೂಟೆ ಸಾಗಿಸಿದ್ದಕ್ಕೆ ಕೂಲಿ 15+5=20 ರೂ. ತೆತ್ತಿದ್ದೆ. ಸಧ್ಯ! ಡಬಲ್ ಬೆಡ್ ರೂಮಿನಲ್ಲಿ ನಾನೊಬ್ಬನೇ ಆಗಿದ್ದರಿಂದ ಮೂಟೆಯನ್ನು ಸಂಕೋಚವಿಲ್ಲದೆ ಒಂದು ಕಡೆ ಇಟ್ಟೆ.

ಮಾರನೇ ದಿನ ಸಾಯಂಕಾಲ ಸೆಮಿನಾರ್ ಮುಗಿಸಿ ರೂಮಿಗೆ ಬಂದೆ. ಆಗ ನನಗೆ ಥಟ್ಟನೆ ಜ್ಞಾಪಕ ಬಂತು. ಹುಣಿಸೆ ಹಣ್ಣನ್ನು ಕೊಂಡಾಗಿನಿಂದ ಮೂಟೆಯನ್ನು ಬಿಚ್ಚೇ ಇರಲಿಲ್ಲ. ಪ್ರತಿವರ್ಷ ಮನೆಯಲ್ಲಿ ಹುಣಿಸೆ ಹಣ್ಣನ್ನು ಬಿಸಿಲಿನಲ್ಲಿ ಹರಡಿ, ಎರಡು ದಿನ ಒಣಗಿದ ಮೇಲೆ ಡಬ್ಬಕ್ಕೆ ತುಂಬುತ್ತಿದ್ದರು. ಅದರಂತೆ ನಾನೂ ಮೂಟೆಯನ್ನು ಬಿಚ್ಚಿ ಹು. ಹಣ್ಣನ್ನು 5-6 ನ್ಯೂಸ್ ಪೇಪರ್‌ಗಳ ಮೇಲೆ ಚೆನ್ನಾಗಿ ಹರಡಿದೆ. ಎರಡು ದಿನ ಒಣಗಿಸಿ ವಾಪಸ್ ಮೂಟೆಯಲ್ಲೇ ತುಂಬಿದೆ.

ಇದರಿಂದ ನನಗೆ ಭಾರೀ ಸಮಸ್ಯೆಯೇ ಉಂಟಾಯಿತು. ಇದುವರೆಗೂ ಮೂಟೆಯ ಒಳಗೇ ಇದ್ದ ವಾಸನೆ ರೂಮನ್ನೆಲ್ಲಾ ವ್ಯಾಪಿಸಿ, ಕಾರಿಡಾರಿನಲ್ಲೆಲ್ಲಾ ಹರಡಿತು, ನನ್ನ ರೂಮಿನಲ್ಲೇ ಇರಲು ಬಂದಿದ್ದ ಒಬ್ಬರು ಗಾಳಿಯನ್ನು ಮೂಸಿ ''ಏ, ಕ್ಯಾ, ಬದಬು?' ಅಂದು ಹೊರಟೇ ಹೋದರು. ಈ ವಾಸನೆಯ ಖ್ಯಾತಿ ಎಷ್ಟಾಯಿತೆಂದರೆ ರೂಂ ಬಾಯಿಗಳು ನನ್ನನ್ನು ಇಮ್ಲೀವಾಲ ಅಂತ ನಾಮಕರಣ ಮಾಡಿದ್ದರು.

ಎಲ್ಲಕ್ಕಿಂತ ಬೇಜಾರಾದದ್ದು ಸೆಮಿನಾರಿನಲ್ಲಿ. ಮೊದಲು ನನ್ನ ಅಕ್ಕ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದವರು ನಂತರ ಎರಡು ಸೀಟು ಬಿಟ್ಟು ಕೂರುತ್ತಿದ್ದರು.

ಇದಕ್ಕೆಲ್ಲಾ ಕಾರಣನಾದ ಶೇಷಾಚಲಪತಿಯ ಮೇಲೆ ಕೋಪ ದಿನೇ ದಿನೇ ಜಾಸ್ತಿಯಾಗುತ್ತಿತ್ತು.

ಈಗ ನನಗಿದ್ದದ್ದು ಒಂದೇ ಲಕ್ಷ್ಯ. ವಾಪಸ್ ಭುವನೇಶ್ವರಕ್ಕೆ ಹೋದ ಕೂಡಲೇ, ಹು. ಹಣ್ಣಿನ ಮೂಟೆಯನ್ನು ಶೇಷಾಚಲಪತಿಯ ಮುಖಕ್ಕೆ ಬಿಸಾಕಿ, ಹೊಟ್ಟೆ ತುಂಬಾ ಬೈದು, (50+35) ರೂ ಕಕ್ಕಿಸುವುದು. ಆಗಲೇ ನನಗೆ ಸಮಾಧಾನ, ಅದಕ್ಕಾಗಿಯೇ ನಾನು ಎದುರು ನೋಡುತ್ತಿದ್ದೆ.

ಮತ್ತೆ ರೈಲಿನಲ್ಲಿ:

ಡೆಲ್ಲಿಯಿಂದ ಹೊರಡುವ ದಿನ ಬಂತು. ರೈಲಿನಲ್ಲಿ ಹು. ಮೂಟೆಯನ್ನು I ಕ್ಲಾಸಿನಲ್ಲಿ ಒಯ್ಯಬೇಕಲ್ಲ, ಅಲ್ಲದೆ ಮತ್ತೆ ಅಲ್ಲಿ ಪ್ರಯಾಣಿಕರ 'ಏ ಕ್ಯಾ ಹೈ?' 'ವ್ಯಾಪಾರಿಗಳೊ?' ಇತ್ಯಾದಿ ಪ್ರಶ್ನಾವಳಿಯನ್ನು ಎದುರಿಸಬೇಕಲ್ಲ ಅಂತ ಚಿಂತಿಸುತ್ತಿದ್ದಾಗ ಒಂದು ಉಪಾಯ ಹೊಳೆಯಿತು. ನಾನು ಹು. ಹಣ್ಣಿನ ವ್ಯಾಪಾರಿ ಅಂತಲೇ ಹೇಳಿದರೆ ಹ್ಯಾಗೆ? ಹೇಗಿದ್ದರೂ ನನ್ನ ಬಟ್ಟೆಯಿಂದ ಈಗಲೂ ಹು. ಹಣ್ಣಿನ ವಾಸನೆ ಬರುತ್ತಿರುವುದರಿಂದ ಎಲ್ಲರೂ ಖಂಡಿತ ನಂಬುತ್ತಾರೆ ಎಂದು ಈ ಪಾತ್ರವನ್ನೇ ಧರಿಸಲು ನಿರ್ಧರಿಸಿದೆ.

ಸಾಯಂಕಾಲ 6ಕ್ಕೆ ಸ್ಟೇಷನ್ನಿಗೆ ಬಂದು I ಕ್ಲಾಸಿನಲ್ಲಿ ಕೂತು ಮೂಟೆಯನ್ನು ನನ್ನ

ಮುಂದೆಯೇ ಇಡಿಸಿದೆ. ಎದುರಿಗಿದ್ದ ಪ್ರಯಾಣಿಕರು 'ಏ ಕ್ಯಾ ಹೈ?' ಅಂದಾಗ 'ಇಮ್ಲೀ' ಅಂದೆ. 'ನೀವು ವ್ಯಾಪಾರಿಗಳೂ?' 'ಹೌದು, ನಾನು ಇಂಡಿಯಾ ದೇಶಕ್ಕೇ ಹು. ಹಣ್ಣಿನ ಹೋಲ್‌ಸೇಲ್ ವ್ಯಾಪಾರಿ. ಡೆಲ್ಲಿಯಲ್ಲಿ ನನ್ನನ್ನು ಇಮ್ಲೀವಾಲ ಎಂತಲೇ ಕರೀತಾರೆ. ಈಗ ಭುವನೇಶ್ವರದ ವ್ಯಾಪಾರಿ ಒಬ್ಬರಿಗಾಗಿ ಸ್ಪೆಷಲ್ ಇಮ್ಲಿಯನ್ನು ತೊಗೊಂಡು ಹೋಗುತ್ತಿದ್ದೇನೆ' ಎಂದೆ. ಮುಂದೆ ಯಾರೂ ಮಾತಾಡಲಿಲ್ಲ. ನನ್ನ ಬಟ್ಟೆಯಿಂದ ಹೊರ ಸೂಸುತ್ತಿದ್ದ ಹು.ಹಣ್ಣಿನ ಪ್ರಭಾವ (ವಾಸನೆ)ಯಿಂದಾಗಿ ನನ್ನ ಪಕ್ಕದ ಸೀಟು ಸಾಮಾನ್ಯವಾಗಿ ಖಾಲಿಯಾಗೇ ಇತ್ತು. ಪ್ರಯಾಣ ಅತ್ಯಂತ ಸುಖಕರವಾಗಿತ್ತು.


ಭುವನೇಶ್ವರಕ್ಕೆ ಎರಡೇ ದಿನ ಬೆಳಿಗ್ಗೇ 6ಕ್ಕೇ ಬಂತು. ಸೂಟ್‌ಕೇಸನ್ನೂ ಮೂಟೆಯನ್ನೂ ಸೈಕಲ್ ರಿಕ್ಷಾಕ್ಕೆ ಹಾಕಿ ಮನೆ ತಲುಪಿದೆ. ರಿಕ್ಷಾದವನಿಗೆ ನಿಂತಿರಲು ಹೇಳಿ ಸೂಟ್‌ಕೇಸನ್ನು ಮಾತ್ರ ಮನೆ ಒಳಗಿಟ್ಟು ಮತ್ತೆ ಆಚೆ ಬಂದೆ. ಕಾಫಿ ತಗೊಂಡು ಬಂದ ಮೀರ ''ಮತ್ತೆ ಹೊರಟೇಬಿಟ್ಟಿರಲ್ಲಾ ಏಕೆ?'' ಅಂದಳು.

''ಏಕೆ ಅಂದರೆ, ನಾನು ಮೊದಲು ಶೇಷಾಚಲಪತಿ ಮನೆಗೆ ಹೋಗಿ ಹು.ಹಣ್ಣಿನ ಮೂಟೆಯನ್ನು ಅವನ ಮುಖಕ್ಕೆ ಬಿಸಾಕಿ, ಹೊಟ್ಟೆ ತುಂಬ ಬೈದು, 90 ರೂ. ವಸೂಲು ಮಾಡಿ ಬರ್‍ತೀನಿ. ಆಮೇಲೆ ನಿಧಾನವಾಗಿ ಕಾಫಿ ಕುಡಿತೀನಿ'' ಎಂದು ಹೇಳಿ ಹೊರಟೆ.

ಆಗ ಅವಳು ''ಅಯ್ಯೋ! ಅವರೆಲ್ಲಿದ್ದಾರೆ. ಮಕ್ಕಳಿಗೆಲ್ಲಾ ರಜ ಬಂತು ಅಂತ ಅವರು ಸಂಸಾರ ಸಮೇತ ಮೊನ್ನೆ ಬೆಂಗಳೂರಿಗೆ ಹೋದರು'' ಅಂದಳು.

ನಾನು ಸುಸ್ತಾದೆ. ಹು.ಹಣ್ಣಿನ ಮೂಟೆ ಪುನರಪಿ ಸ್ವಸ್ಥಾನಂ ಅಂತ ವರಾಂಡ ಮೂಲೆಯಲ್ಲಿ ಕೂತಿತು.

★★★



ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆಯಲ್ಲಿ
ತೀರ್ಪುಗಾರರ ಮೆಚ್ಚುಗೆ ಪಡೆದ ಲೇಖನ

ನಾನು ಸ್ಪಿರಿಚುವಲ್ ಅಲ್ಲ!

– ಚಿತ್ರ, ರಾಮಚಂದ್ರನ್

''ನಮ್ಮ ಚೀಫ್ ಮನೇಲಿ ಪಾರ್ಟಿ ಇದೆ. ಬೇಗ ರೆಡಿ ಆಗು.'' ಎಂದು ಇವರು ಅಂದಾಗ ನನಗೆ ಬೇಸರವೇ ಆಯಿತು. ಅದ್ಯಾಕೋ ಈ ಪಾರ್ಟಿ ಗೀರ್ಟಿ ಎಲ್ಲ ನನಗೆ ಒಗ್ಗೋದೇ ಇಲ್ಲ.

ನಮ್ಮದು ಬಹಳ ಸಂಪ್ರದಾಯಸ್ಥ ರಿಲಿಜಿಯಸ್ ಮೈಸೂರು ಮನೆತನ. ಮಡಿ-ಮೈಲಿಗೆ, ಹಬ್ಬ-ಹುಣ್ಣಿಮೆ, ಪೂಜೆ ಪುನಸ್ಕಾರ, ತಿಥಿ - ತೀರ್ಥಯಾತ್ರೆ, ದಾನ-ಧರ್ಮ, ಸತ್ಯ ಕರ್ಮ ಎಲ್ಲ ಪದ್ಧತಿಗಳನ್ನು ಅನುಸರಿಸುತ್ತಿದ್ದ ಮನೆತನ. ಇದಕ್ಕೆ ಉದಾಹರಣೆ ಎಂದರೆ ನನ್ನ ಮುತ್ತಾತ ಜಗದ್ಗುರುಗಳನ್ನು ಮನೆಗೆ ಆಹ್ವಾನಿಸಿ ಪಾದ ಪೂಜೆ ನಡೆಸಿದ ಪ್ರಸಂಗ ಹೇಳಲೇಬೇಕು.

''ರೆಡಿ ಆಗು ಅಂದ್ರೆ ಏನು ಯೋಚಿಸ್ತಾ ನಿಂತ್ಬಿಟ್ಟೆ? ಶ್ರೀಯವರೂ ಶ್ರೀಮತಿಯವರೂ ಆಹ್ವಾನಿಸಿದ್ದಾರೆ. ಹೋದ್ರೆ ಒಳ್ಳೆದು.''

''ಇಲ್ಲ... ನಾಳಿದ್ದು ಗೌರಿ ಗಣೇಶ?''

''ಇನ್ನೂ ಎರಡು ದಿನಗಳಿವೆಯಲ್ಲ? ನಾನು ಹೆಲ್ಪ್ ಮಾಡ್ತಿನಿ. ಇವಾಗ ಹೊರಡಮ್ಮ ಪ್ಲೀಸ್'' ಇವರ 'ಹೆಲ್ಪ್' ಎಲ್ಲ ಬರಿ 'ಗಲ್ಪ್' ಮಾಡೋದು ಅಂತ ಗೊತ್ತಿತ್ತು. ಆದರೂ ಆ 'ಅಮ್ಮ' ಮತ್ತು 'ಪ್ಲೀಸ್'ಗಾಗಿ ಹೊರಟೆ.

ಕಾರಲ್ಲಿ ಕೂತಾಗ ಮುತ್ತಾತನ ಪಾದಪೂಜೆ ಪ್ರಸಂಗ ಟಿ.ವಿ. ಸೀರಿಯಲ್ ಹಾಗೆ ಕಣ್ಣ ಮುಂದೆ ಹಾದು ಹೋಗ ತೊಡಗಿತು.

ಗುರುಗಳ ಆಗಮನಕ್ಕಾಗಿ ಮನೆ ಎಲ್ಲ ಸಡಗರ. ಮನೆಯ ಯಜಮಾನಿಗೋ ಖುಷಿಯೋ ಖುಷಿ. ಮನೆಯ ಸಿಬ್ಬಂದಿ ಆಳುಕಾಳುಗಳಿಂದ ಹಿಡಿದು ನಿನ್ನೆ ಮೊನ್ನೆ ಹುಟ್ಟಿದ್ದ ಹಸಿಗೂಸಿನವರೆಗೂ ಎಲ್ಲ ಗಂಡು ಪ್ರಾಣಿಗಳಿಗೂ ಜುಟ್ಟು ಬಿಡಿಸಲು ಆಜ್ಞಾಪಿಸಿದ್ದರು ಮುತ್ತಾತ. ಅಂದಮೇಲೆ ಲಕ್ಷ್ಮೀದೇವಿಯ ಕಡೆಗಣ್ಣು ಆತನ ಮೇಲೆ ಬಿದ್ದ ಹಾಗೆ ತಾನೆ? ಆ ಖುಷಿಯಲ್ಲೇ ಆತ ಸಿಕ್ಕ ಸಿಕ್ಕ ಬುರುಡೆಗಳನ್ನೆಲ್ಲಾ ಎಳೆದೆಳೆದು ಹೆರೆದಿದ್ದೂ ಹೆದರಿದ್ದೆ!

''ಈವಾಗ ಅದೆಂತ ಧ್ಯಾನ? ಇಳಿ.''

ಚೀಫ್ ಮನೆ ತಲುಪಿದ್ದಾಗಿತ್ತು. ಕಾರಿನಿಂದಿಳಿದು ಒಳಗೆ ಹೋಗಿ ಶ್ರೀಯವರನ್ನೂ ಶ್ರೀಮತಿಯವರನ್ನೂ ಅಭಿನಂದಿಸಿ ಲಾನ್ ಕಡೆ ನಡೆದೆವು.

ಲಾನ್ ಮೇಲಿದ್ದ ಕುರ್ಚಿಗಳಲ್ಲಿ ಗಂಟು ಗಂಟಾಗಿ ಕುಳಿತಿದ್ದ ಜನರ ಮಧ್ಯೆ ಹುಡುಕಿ ಹುಡುಕಿ, ನನಗೆ ಸ್ವಲ್ಪ ಪರಿಚಯವಿದ್ದ ಕಾಂತಿ ಪ್ರಸಾದ್ ಪಕ್ಕ ನನ್ನನ್ನ ಕುಕ್ಕರಿಸಿ, ತನ್ನ ಮಿತ್ರರೊಡನೆ ಹೋಗಿ ಸೇರಿಕೊಂಡರು ಇವರು.

''ನೀವ್ಯಾಕೆ ಪೆಚ್ಚಿಗೆ ಪಾರ್ಟಿಗಳಲ್ಲಿ ಕಾಣ್ಸೋದೇ ಇಲ್ಲ?'' ಯಾವಾಗ ಕಂಡರೂ ಕೇಳುವ ಅದೇ ಪ್ರಶ್ನೆ ಕೇಳಿದರು ಕಾಂತಿ ಪ್ರಸಾದ್ (ಹೆಂಡತಿ)

ಈ ಕಾಂತಿ ಪ್ರಸಾದ್ ಅನ್ನೋ ಹೆಸರು, ಸ್ನೇಹಿತರ ಮಧ್ಯೆ ಗಂಡ ಹೆಂಡಿರಿಬ್ಬರನ್ನೂ ಗುರ್ತಿಸುವ ಹೆಸರಾಗಿತ್ತು. ಒಬ್ಬರ ಹೆಸರು ಮಾತ್ರ ಹೇಳಿದರೆ ಗುರ್ತಿಸಲಾರದಷ್ಟು ಅರ್ಧನಾರೀಶ್ವರ ತತ್ವ ಪ್ರಕಟಿಸುವ ಜೋಡಿಯಾಗಿದ್ದರು.

''ನಿಮ್ಮ ಹೆಂಡ್ತಿ ಘೋಷಾನೆ, ಅಂತ ನಿಮ್ಮವರ್ನ ಕೇಳ್ತಾನೆ ಇರ್ತಿವಿ.'' ಎನ್ನುತ್ತಲೇ ಬಂದು ಕೂತರು ಕಾಂತಿ ಪ್ರಸಾದ್ (ಗಂಡ). ಎಲ್ಲರೂ ನಕ್ಕರು. 'ಜೋಕ್' ಅಂತೆ!

ಇಂತಹ ಬೇಸತ್ತ ಜೋಕುಗಳೆಲ್ಲ ಇಂತಹ ಪಾರ್ಟಿಗಳಲ್ಲಿ ಕೇಳಿ ಕೇಳಿ ಬೇಜಾರಾಗಿತ್ತು. ಒಂದು ನಿರ್ಜೀವ ನಗೆ ಬೀರಿದೆ. ನನ್ನ ನೆನಪೆಲ್ಲ ಮತ್ತೆ ತಾತನ ಕಾಲಕ್ಕೆ ಜಾರಿ ಹೋಯಿತು.

ಒಳಗೆ ಹೆಂಗೆಳೆಯರೆಲ್ಲ ಮನೆಯ ಇತರ ಚಟುವಟಿಕೆಗಳಲ್ಲಿ ಮುಳುಗಿದ್ದರು. ಹಿತ್ತಲಿನಲ್ಲಿ ಜುಟ್ಟು ಬಿಡಿಸೋ ಸಂಭ್ರಮ. ಇದ್ದಕ್ಕಿದ್ದ ಹಾಗೆ ಕೇಳಿ ಬಂದ ಮಗುವಿನ ಅಳು ಅಜ್ಜಿಯನ್ನ ಹಿತ್ತಲಿಗೆ ಓಡಿಸಿತು.

ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿಗೆ ಹರಕೆ ಹೊತ್ತು ಬೆಳೆಸಿದ್ದ ಕೂದಲನ್ನೆಲ್ಲ ಕಳೆದುಕೊಂಡು, ಒಂದೇ ಒಂದು ಪುಳ್ಳಂಜುಟ್ಟು ಮಾತ್ರ ಮೀಸಲಾಗಿದ್ದ ತಲೆಯೊಡನೆ ಮಗು ಅಳುತ್ತಿತ್ತು.

''ಅಯ್ಯೋ ಪಾಪಿ! ಹೆಣ್ಣು ಮಗುಗೇಕೋ ಜುಟ್ಟು ಬಿಡಿಸಿದೆ?'' ಅಜ್ಜಿ ಮಾಡಿದ ರಂಪಕ್ಕೆ ಹಜಾಮ ಬೆದರಿ ಹೋದ. ಮಗುವಿನ ಪೊದೆಯಂತಹ ಕೂದಲು ನೋಡಿ ಕೈ ತುರಿಸಿತೋ, ಇಲ್ಲ ಅದು ತೊಟ್ಟಿದ್ದ 'ಯೂನಿಸೆಕ್ಸ್' ಉಡುಪು - ಅದೇ, ಜಬಲ - ಚೆಡ್ಡಿ ಆತನ ಕಣ್ಣಿಗೆ ಮಣ್ಣೆರಚಿತ್ತೋ, ಪರಿಣಾಮವೇನೋ ಮೂರು ವರ್ಷದ ಗೌರಿ ಅತ್ತೆಯ ತಲೆಯ ಮೇಲೆ ಬಂದು ಕೂತಿತ್ತು.

ತಾತನ ಕಣ್ಣಲ್ಲಿ ಕೆಂಡ, ಗುರುಗಳು ಬರೋ ಸಮಯ ರೇಷ್ಮೆ ಲಂಗ ಅಂಗಿ ತೊಟ್ಟ ಹೆಣ್ಣು ಮಗು ಜುಟ್ಟು ಬಿಟ್ಟಿದ್ದರೆ ಹೇಗೆ? ಅಂದೇ ಆ ಕ್ಷಣವೇ ಗೌರಿ ಅತ್ತೆಗೆ ನಂಜನಗೂಡು ಪಯಣ. ಅಲ್ಲಿ ದೇವರಿಗೆ ಮಿಕ್ಕಿದ್ದ ಜುಟ್ಟು ಅರ್ಪಣ. ಅಂತೂ ಇಂತೂ ಒಂದೇ ದಿವಸದಲ್ಲಿ ಜುಟ್ಟು ಬಿಡಿಸಿ, ಜುಟ್ಟು ತೆಗೆಸಿ, ಸಂಜೆ ಮನೆಯಲ್ಲಿ ಆರತಿ ಮಾಡಿ, ಗೌರಿ ಅತ್ತೆಗೆ ಎಲ್ಲ ಕಲ್ಯಾಣವೂ ಆಯಿತಂತೆ!

ನಾನು ನೆನಪಿನ ಓಟದಲ್ಲಿ ಸ್ವಲ್ಪ ಜೋರಾಗಿಯೇ ನಕ್ಕಿರಬೇಕು. ಎಲ್ಲರೂ ನನ್ನನ್ನು ವಿಚಿತ್ರವಾಗಿ ನೋಡಿದರು. 'ಘೋಷಾ' ಜೋಕಿಗೆ ತಡವಾಗಿ ಬಂದ ಟ್ಯೂಬ್‌ಲೈಟ್ ನಗೆ ಅಂದುಕೊಂಡರೋ ಏನೋ.

ಮಾಣಿ ತಂದು ತೋರಿಸಿದ ರಂಗುರಂಗಿನ ಪಾನೀಯಗಳಿಂದ ನಾನು 'ಜಲ್ ಜೀರ' ಆರಿಸಿಕೊಂಡೆ.

''ಅಂದ ಹಾಗೆ ನಿಮ್ಗೆ ಗೌರಿ ಹಬ್ಬ ಉಂಟೆ?'' ಯಾವುದೋ ರಿಲಿಜಿಯಸ್ ಪ್ರಾಣಿ ಕೇಳಿತು.

''ಓ ಹೋ ಹೊ. ಅದೇನ್ ಹಾಗೆ ಕೇಳ್ಬಿಟ್ರಿ? ದೊಡ್ಡ ಹಬ್ಬವಲ್ವೆ? ನಮ್ಮನೇಲಂತೂ

ಪುರೋಹಿತರು ಬಂದು ಮಾಡಿಸ್ತಾರೆ. ಮರಳು ಮೂಟೆ ಗೌರಿ, ಮೊರದ್ಬಾಗ್ನ, ಹೋಳಿಗೆ ಊಟ ಎಲ್ಲ ಉಂಟು. ನಮ್ಮನೇವ್ರಂತೂ ತುಂಬ ರಿಲಿಜಿಯಸ್ಸಪ್ಪ. ನಮ್ಮ ಸಂಪ್ರದಾಯ, ನಮ್ಮ ಕಲ್ಚರ್ ನಾವೇಕೆ ಬಿಡ್ಬೇಕು ಹೇಳಿ. ಇನ್ನು ಹೇಳೋದಾದ್ರೆ ಇತ್ತೀಚೆಗೆ ಹುಟ್ಕೊಂಡಿವೆ ನೋಡಿ 'ಸ್ಪಿರಿಚುವಲ್' ಅಂತ ಒಂದು 'ಗ್ಯಾಂಗು'... ಇದರ ಮಧ್ಯೆ ನಮ್ಮಂತೋರು ಕೆಲವರಿದ್ರೇ ತಾನೆ ನಮ್ಮ ಕಲಾಚಾರ ಉಳಿಯೋದು....''

ಕಾಂತಿ ಪ್ರಸಾದ್ ಪಟಪಟ ಮಾತನಾಡಿದಳು (ಪ್ರತಿ ಸಾರಿಯೂ ಗಂಡ ಹೆಂಡತಿ ಅಂತ ಹೇಳೋದೇ? ಅದಕ್ಕೆ ಮಾತನಾಡಿದಳು.)

ಇವರದ್ದೂ ನಮ್ಮ ಮನೆತನದ ಹಾಗೆಯೇ ಅಂದುಕೊಂಡೆ. ಮನೆ ಸಾರಿಸಿ, ಮಡಿಯುಟ್ಟು ಪೂಜೆಗೆ ಸಜ್ಜುಗೊಳಿಸಿ! ಅದ್ರಲ್ಲೂ ದೇವರ ಪೂಜೆಗಿಂತ ಹೊಟ್ಟೆ ಪೂಜೆಗೆ ಬಹಳ ಮುತವರ್ಜಿ ವಹಿಸಿ... ಸಾಕಪ್ಪ ಸಾಕು. ಹಾಂ! ಮಡಿ ಉಟ್ಟು ಅಂದೆನಲ್ಲ? ಆ ಹತ್ತು ಗಜವನ್ನು ಮೊದಲನೆಯ ದಿವಸ ಒಗೆದು ಮಡಿ ಮಾಡೋದು ಒಂದು ಯಾಗವೆಂದರೆ, ಪೂಜೆಯ ದಿನ ಅದನ್ನ ಉಡೋದೋ ಮತ್ತೊಂದು ಯಾಗವೇ ಆಗಿರುತ್ತಿತ್ತು.

ನನ್ನ ಅತ್ತೆ, ಡಿಸ್ಟ್ರಿಕ್ಟ್ ಜಡ್ಜ್ ಆಗಿದ್ದ ಮಾವನೊಡನೆ ಯಾವ ಸಮಾರಂಭಕ್ಕೆ ಹೋದರೂ ಸರಿ, ಕ್ಲಬ್ಬು, ಗಾಯನ ಸಮಾಜ, ಕ್ರಿಕೆಟ್ ಮ್ಯಾಚಿಗೆ ಹೋದರೂ ಸರಿ, ಕಚ್ಚೆ ಸೀರೆ, ಕೂಲಿಂಗ್ ಗ್ಲಾಸ್, ಹ್ಯಾಂಡ್‌ಬ್ಯಾಗ್ ಭೂಷಿತೆಯಾಗಿಯೇ ಹೋಗುತ್ತಿದ್ದರು.

''ಹತ್ತು ವರ್ಷಕ್ಕೆ ಮದುವೆಯಾದಾಗ ಉಡಲಾರಂಭಿಸ್ದೆ. ಎಲ್ಲ ಕೆಲಸ ಅದ್ರಲ್ಲೇ ಮಾಡ್ಕೊಳ್ಲಿಲ್ವೆ?'' ಸಾಮಾನ್ಯ ಆರುಗಜ ಸೀರೆ ನೋಡಿದಾಗ ಕೂಡ, ಬಿಕಿನಿ ನೋಡಿದಷ್ಟು ತಾತ್ಸಾರದಿಂದಲೇ ಆ ನೋಟ ಇರುತ್ತಿತ್ತು.

ಅಂತಹವರ ಆಚಾರ ಕೆಡಿಸೋ ಮನಸ್ಸೋ ಧೈರ್ಯವೋ ನನಗಿರಲಿಲ್ಲ. ಹಾಗಾಗಿ ಹತ್ತು ಗಜ ಸೀರೆಯುಟ್ಟು ಪೂಜೆಗೆ ಕೂತಾಗ ನನ್ನ ಸ್ಥಿತಿ ಕೌರವ ಸಭೆಯ ದ್ರೌಪದಿಯ ಪರಿಸ್ಥಿತಿಯೇ ಆಗಿರುತ್ತಿತ್ತು. ಮನಸ್ಸು ಪೂರಾ 'ಇಗೋ ಜಾರಿದೆ ಅಗೋ ಬಿದ್ದೆ' ಎಂದು ಹೆದರಿಸುತ್ತಿದ್ದ ಸೀರೆಯ ಮೇಲೆ.

''ಮಮ ಮಾವಜ್ಜೀವ ದೀರ್ಘ ಸೌಮಂಗಲ್ಯಾಭಿವೃಧ್ಯರ್ಥಮ್'' ಎಂದು ಪುರೋಹಿತರು ಹೇಳಿಕೊಟ್ಟಾಗ, ''ಮಮ ಯಾವ ಜ್ಜೀವ ಸೀರೆ ಭದ್ರವಾಗಿರಲ್ಲರ್ಥಮ್'' ಎಂದೇ ನಾನು ಹೇಳಿಕೊಳ್ಳುತ್ತಿದ್ದೆ.

ಹೀಗೇ ಒಂದು ಹಬ್ಬದ ದಿನದಲ್ಲಿ ನಾನು ಹತ್ತು ಗಜದೊಡನೆ ಸೆಣಸಾಡುತ್ತಿರಲು ಕೇಳಿಸಿತು ಒಂದು ಅಶರೀರ ವಾಣಿ.

''ಹಿರಿಯೋರು ಹೇಳಿರೋದೇನಂದ್ರೆ, ಆತ್ಮಕ್ಕೆ ಈ ಶರೀರ ಒಂದು ಉಡುಪು. ಈ ಉಡುಪಿಗೆ ಮತ್ತೊಂದು ಉಡುಪು ತೊಡಿಸಲು ಈ ಪರಿಶ್ರಮವೇಕೆ?''

ನನ್ನವರೆ! ಅವರ ಈ ವೇದಾಂತ ಕೇಳಿ ನನ್ನ ಸಿಟ್ಟು ನೆತ್ತಿಗೇರಿತು. ಪುರೋಹಿತರು ಬರೋ ಈ ವೇಳೆಯಲ್ಲಿ ನಾನಿನ್ನೂ ತಯಾರಾಗಿರದ ಈ ಸಮಯದಲ್ಲಿ ಈ ಮನುಷ್ಯನ ಬಾಯಲ್ಲಿ ವೇದಾಂತ ಯಾರಿಗೆ ಬೇಕಿತ್ತು? ನಾನು ನಿಧಾನದಲ್ಲಿದ್ದಾಗ ಇವರು ಹೇಳಿದರು. ''ದೇವರಿಗೆ ಬೇಕಿರೋದು ನಿನ್ನ ಭಕ್ತಿಯೇ ಹೊರತು ನಿನ್ನ ಕಚ್ಚೆ ಸೀರೆ ಅಲ್ಲ...''

ನನಗೂ ಸರಿ ಅನ್ನಿಸಿತು. ನನ್ನ ಹತ್ತು ಗಜ ಸೀರೆಗಳನ್ನೆಲ್ಲ ಹರಿದು ಚೂಡಿದಾರ್ ಹೊಲಿಸಿ ಹೆಣ್ಣು ಮಕ್ಕಳಿಗೆ ಹಂಚಿದ್ದಾಯಿತು. ಕ್ರಮೇಣ ಮೊರದ್ದಾಗಿನ, ಸ್ಟೀಲ್ ಅಲ್ಲವೇ ಟಪ್ಪರ್‌ವೇರ್ ಬಾಗಿನವಾಯಿತು. ಎಲ್ಲ ಅಂಗಡಿಗಳಲ್ಲೂ ಶುದ್ಧಗೊಳಿಸಿದ ಮಳಿಗೆ ಸಿಕ್ಕೊವಾಗ ಮೊರ ಯಾರಿಗೆ ಬೇಕಿತ್ತು? ಬೆರಿಕೆ ಕಲ್ಲ ಬಗ್ಗೆ ನಮಗೆ ಯಾಕೆ ಯೋಚನೆ? ಕಲ್ಲೋ ಹಲ್ಲೋ ಅನ್ನೋದು ತಿನ್ನುವವರಿಗೆ ಬಿಟ್ಟಿದ್ದು.

"ತಿಥಿ ಗಿತಿ ಬಂದ್ರಂತೂ ಕೇಳ್ಲೇಬೇಡಿ. ಆ ಆಚಾರ ಪಾಲ್ನೆ ಮಾಡೋ ವೇಳೆಗೆ ನಮ್ಮ ತಿಥಿಯೇ ಆಗ್ಹೋಗತ್ತೆ. ಅಷ್ಟು ಶಿಸ್ತು..." ಕಾಂತಿ ಪ್ರಸಾದ್ ತನ್ನ ಮಡಿವಂತಿಕೆಯ ಬಗ್ಗೆ ಇನ್ನೂ ಬಡಬಡಿಸುತ್ತಿದ್ದರು (ಖು).

"ಅಂದ ಹಾಗೆ, ನೀವು ರಿಲಿಜಿಯಸ್ಸೋ ಸ್ಪಿರಿಚುವಲ್ಲೋ?" ನನ್ನ ಮೌನ ಮುರಿಯೋ ಯತ್ನದಲ್ಲಿ ಕಾಂತಿ ಪ್ರಸಾದ್, ನನ್ನ ಕುರಿತು ಕೇಳಿದರು (ಸು.)

"ತಿಥಿ ಗಿಥಿ ಅಂತ ನೀನೇನೂ ತೊಂದ್ರೆ ತಗೋ ಬೇಡ. ನೀನು ಕಷ್ಟಪಟ್ಟು ಮಾಡೋ ತಿಥಿ ಅಡಿಗೆ, ಆ ಪುರೋಹಿತರು ಬೇರೆ ಕಷ್ಟಪಡ್ಕೊಂಡು ತಿನ್ಬೇಕು..." ಇವರು ಅಂದಾಗ ನನ್ನ ಕಣ್ಣಲ್ಲಿ ಕಿಡಿ.

"ಅಯ್ಯೋ ನೀನು ಬೇರೇನೂ ಅನ್ನೋದು ಬೇಡ. ಪುರೋಹಿತರೆಲ್ಲ ಸೆಲ್‌ಫೋನ್ ಹಿಡಿದು ಸ್ಕೂಟರ್‌ಗಳಲ್ಲಿ ಹಾರಾಡ್ತಾ ಇರೋ ಅವರ ಬಿಜೀ ಕಾಲದಲ್ಲಿ, ಅಗತ್ಯವಾಗಿ ಊಟ ಹಾಕ್ತೀವಿ ಅಂದ್ರೆ, ಊಟ ಮಾಡಕ್ಕೆ ಸಿಕ್ಕೋದು ಹಲ್ಲಿಲ್ಲದ ರಿಟೈಯರ್ಡ್ ಮುದಿ ಪುರೋಹಿತರೆ. ಬಿ.ಪಿ. ಶುಗರ್ ಎಲ್ಲಾರ್ಗೂ ಇರೊದೇ ತಾನೆ. ಅದಕ್ಕೆ ಹೇಳ್ದೆ. ನಿನ್ಗೂ ಕಷ್ಟ ಬೇಡ, ಅವರೂ... ಸಾರಿ ಸಾರಿ. ವೃದ್ಧಾಶ್ರಮಕ್ಕೆ ಮಳಿಗೆ ಕೊಟ್ರೆ ಹೇಗೆ?"

ನಮ್ಮ ಮನೆಯಲ್ಲಿ ಕ್ರಾಂತಿ! ಕಾಲಕ್ಕೆ ತಕ್ಕಂತೆ ಸ್ಪಿರಿಚುವಲ್ಲಾಗಿಬಿಟ್ರೆ, ಒಳ್ಳೆಯದೇ ಅಲ್ಲವೆ? ಒಂದು ಪದ್ಧತಿಯಿಂದ ಮತ್ತೊಂದಕ್ಕೆ ಮೌಲ್ಯಗಳನ್ನ ಬಿಟ್ಟುಕೊಡದೆ, ಪರಿವರ್ತನೆ ಆಗೋದೇ ಸ್ಪಿರಿಚುವಲ್ ಅಂದರೆ, ನಾನು ಸ್ಪಿರಿಚುವಲ್ಲೇ. ನಾನು ಮಾತನಾಡಲು ಬಾಯಿ ತೆರೆಯುವಷ್ಟರಲ್ಲಿ ಮತ್ತೆ ಕಾಂತಿ ಪ್ರಸಾದ್ ಶುರು ಮಾಡಿದರು (ಖು). ಕೂತಿದ್ದವರೆಲ್ಲ ಬರಿ ಮೌನ ಗೌರಿಗಳೇ ಆಗಿದ್ದರು.

"ನನ್ನ ಮಗಳದ್ದು ಲವ್ ಮ್ಯಾರೆಜ್ಜ್. ಆದ್ರೆ ನೋಡಿ ತನ್ಗಿಂತ ಎಂಟು ವರ್ಷ ಹಿರಿಯನಾದ, ನಮ್ಮವರಾದ ಒಬ್ಬ ವರನನ್ನೇ, ಸಂಪ್ರದಾಯಕ್ಕೆ ಭಂಗ ಬರದ್ದಾಗೆ ಆರಿಸ್ಕೊಂಡ್ಳು. ವಿ ಆರ್ ವೆರಿ ಹ್ಯಾಪ್ಪಿ. ನಾವು ಬಹಳ ರಿಲಿಜಿಯಸ್ ಅಂದ್ಮೇಲೆ, ನನ್ನ ಮಕ್ಕಳೂ ಅದ್ರಲ್ಲೇ ಮಿಂದವರಲ್ವೆ?"

ಕಾಂತಿ ಪ್ರಸಾದ್ ಮಾತು ಮುಗಿಸದಿದ್ದರೂ, ಜಲ್ ಜೀರ ಮಾತ್ರ ಒಂದೊಂದಾಗಿ ಮುಗಿಯುತ್ತಲೇ ಇತ್ತು.

"ನಿಮ್ಮ ಮಗನ್ ಮದ್ವೆ ಯಾವಾಗ? ಸ್ಟೇಟ್ಸಲ್ಲಿದ್ದಾನಲ್ಲ?"

ಸ್ಟೇಟ್ಸಲ್ಲಿದ್ದ ನನ್ನ ಮಗನ ನೆನಪಾಯಿತು. ಹೋದ ದೀಪಾವಳಿಗೆ ಆತ ಬಂದ. ತಾನು ವರಿಸಿದ ಹೆಣ್ಣ ಬಗ್ಗೆ ಹೇಳಿದ. ಜೊತೆಯಲ್ಲಿ ಕೆಲಸ ಮಾಡುತ್ತಾಳೆಂದ. ತನಗಿಂತ ನಾಲ್ಕು

ವರ್ಷ ಕಿರಿಯವಳೆಂದು. ದೈವಭಕ್ತಿಯುಳ್ಳವಳೆಂದ. ಮನೆ ಕೆಲಸಗಳನ್ನೆಲ್ಲ ಚೆನ್ನಾಗಿ ನಿಭಾಯಿಸಬಲ್ಲವಳೆಂದ. ಹೆಸರು ಎಸ್ತೆಲ್ಲ ಎಂದ.

ನಾವು ಕಣ್ಣು ಮಿಟುಕಿಸಲಿಲ್ಲ. ಒಂದೇ ನೀರು, ವಿವಿಧ ಪಾತ್ರೆಗಳಲ್ಲಿ ವಿವಿಧ ಆಕಾರ ಹೊಂದಲ್ಲವೆ? ಒಂದೇ ಸೂರ್ಯ ಅವುಗಳಲ್ಲಿ ಅನೇಕ ಮರಿ ಸೂರ್ಯರ ಹಾಗೆ ಕಾಣಲ್ಲವೆ? ನಾವು ಸಂತೋಷದಿಂದ ನಮ್ಮ ಮುದ್ದಿನ ಮಗನಿಗೆ ಮುದ್ದಿನ ಬಿಳಿ ಹೆಂಡ್ತಿ ತಂದುಕೊಂಡಾಗ ಎಲ್ಲರೂ ಪಶ್ಚಾತ್ತಾಪ ಪಟ್ಟಂತೆ ಕಂಡಿತು.

ಇಗೋ, ನನ್ನ ಮಗನ ವಿಷಯ ಕೇಳಿದ ಕಾಂತಿ ಪ್ರಸಾದ್ ಕೂಡ ಅದೇ ರೀತಿ ನನ್ನನ್ನ ನೋಡಿದಂತೆ ಇತ್ತು. ಮೊದಲ ಬಾರಿಗೆ ಅವರ(ಳ) ಬಾಯಿಂದ ಮಾತು ಹೊರಡದಂತಿತ್ತು.

ಆದರೆ ನಾನೋ ಬಹಳ ಖುಷಿಯಲ್ಲಿದ್ದೆ. ಪದ್ಧತಿಗಳಿಂದ, ಜಾತಿವಂತಿಗೆಯಿಂದ, ಮಡಿವಂತಿಕೆಯಿಂದ, ಮಾನವೀಯವಾಗಿ ಸ್ಪಿರಿಚುವಾಲಟಿಯನ್ನ ಮಾತ್ರ ಬೇರ್ಪಡಿಸಿ ತೆಗೆದುಕೊಂಡು ನೀರಿನಿಂದ ಹಾಲು ಬೇರೆ ಮಾಡೋ ಹಂಸ ನಾನಾಗಿದ್ದೆ. ಇದೇ ರೀತಿ ಮುಂದುವರೆದರೆ ಶೀಘ್ರದಲ್ಲೇ ನಾನು ಪರಮ ಹಂಸೆಯೂ ಆಗುವೆನೇನೋ?

''ಈ ಜಗತ್ತಲ್ಲಿ ಅದೆಷ್ಟು ಮೂಳೆ ಮಾಂಸದ ಕುಡಿಕೆಗಳೋ? ನಿಮ್ಮ ಮಗ ವರಿಸಿದ್ದು ಒಂದು ಬಿಳಿ ಕುಡಿಕೆಯಷ್ಟೆ. ಯೋಚ್ನೆ ಬಿಡಿ. ನಾವೆಲ್ಲ ವಸುದೈವ ಕುಟುಂಬಕದವರಲ್ಲವೇ? ಮಕ್ಳು ಸುಖ್ವಾಗಿದ್ರೆ ಸಾಕು. ಅಷ್ಟೆ ಅಲ್ವೆ ನಮ್ಗೆ ಬೇಕಾದ್ದು?'' ರಿಲಿಜಿಯಸ್ ಕಾಂತಿ ಪ್ರಸಾದ್ (ಹೆಂಡತಿ) ಬಾಯಿನಿಂದ ಈ ಮಾತು? ನಾನು ನಿಜಕ್ಕೂ ಬೆಚ್ಚಿಬಿದ್ದೆ.

''ಆ ಕಾಂತಿ ಪ್ರಸಾದ್ ಬಹಳ ರಿಲಿಜಿಯಸ್ ಅನ್ನಸ್ತೆ. ಆದ್ರೂ ನಮ್ಮ ಆದಿತ್ಯ ವಿಷಯ ಕೇಳಿದ್ಮೇಲೆ ಹೊಡೆದ್ಲು ನೋಡಿ ಒಂದು ಪಲ್ಟಿ...''

ಮನೆಗೆ ಹಿಂದಿರುಗುತ್ತಿರಲು, ನಾನು ಇವರಿಗೆ ಎಲ್ಲ ವಿವರಿಸಿದೆ. 'ಆಕೆ ತುಂಬ ಸ್ಪಿರಿಚುವಲ್ಲಾದಾಗ ಮಾತ್ರ, ಹಾಗೆ ರಿಲಿಜಿಯಸ್ಸಾಗಿ ಮ ತಾಡ್ತಾಳೆ ಅಷ್ಟೆ. ಸ್ಪಿರಿಚುವಲ್ಲಾದ್ರೆ ಪಲ್ಟಿ ಹೊಡೆಯೋದೂ ತಪ್ಪಿದ್ದಲ್ಲ ತಾನೆ?'' ಇವರು ನಕ್ಕರು.

ಇವರ ಮಾತಿನಲ್ಲಿ ಏನೋ ಕೊಂಕು ಇದ್ದಂತಿತ್ತು. ಕಣ್ಣು ಕಣ್ಣು ಬಿಟ್ಟೆ.

''ಅಯ್ಯೋ ಪೆಚ್ಚೆ! ಅವಳು ಸ್ಪಿರಿಟ್ ಕುಡಿದಿದ್ದು ನೋಡ್ಲಿಲ್ವ? ಪಾರ್ಟಿ ಮುಗಿಯೋ ವರ್ಗೂ ಬಹಳ ಸ್ಪಿರಿಚುವಲ್ಲಾಗೇ ಇದ್ಲಲ್ಲ?''

ನನಗೆ ಎದೆ 'ಜಲ್' ಎಂದಿತು! ಒನಕೆ ನುಂಗಿ ಅರಗಿಸಿಕೊಳ್ಳೋ ಪ್ರಯತ್ನದಲ್ಲಿದ್ದವಳ ಹಾಗೆ, ಅವಳು ಜಲ್ ಜೀರಾ ಲೋಟಗಳನ್ನು ಖಾಲಿ ಮಾಡಿದ ವೇಗ ನೆನಪಾಯಿತು.

''ಹಾಗಾದ್ರೆ ಅವಳು ಕುಡಿದಿದ್ದು ಜಲ್ ಜೀರ ಅಲ್ವೆ?'' ಜಲ್ ಜೀರಾಗೂ ವಿಸ್ಕಿಗೂ ವ್ಯತ್ಯಾಸ ತಿಳಿಯಲಾರದ ನನ್ನ ಮರ ಮಂಡೆಗೆ ರಿಲಿಜಿಯಸ್ಸಿಗೂ ಸ್ಪಿರಿಚುಯಲ್ಲಿಗೂ ವ್ಯತ್ಯಾಸ ಕಂಡುಕೊಂಡು ಬಿಟ್ಟ ದರ್ಪ ಒಂದು ಕೇಡೆ? ನಾನು ಪರಮಹಂಸೆ ಯಾಗೋದಿರಲಿ, ಬರಿ ಹಂಸವೂ ಅಲ್ಲ ಎಂಬುದು ದಿಟವಾಯಿತು.

ಈಗಲಂತೂ ಯಾರಾದರೂ ಕೇಳಿದರೆ, ನಾನು ಏನೇ ಆಗಿದ್ದರೂ ಸ್ಪಿರಿಚುವಲ್ ಮಾತ್ರ ಅಲ್ಲ ಅಲ್ಲ ಅಲ್ಲ ಎಂದು ಆಣೆ ಇಟ್ಟು ಹೇಳಲಾರಂಭಿಸಿದೆ!

ಉಮಾಪತಿ

- ನಾಗೂಶ್ರೀ ಸೂರಿ

ನೆರೆಹೊರೆ ಜನ ಹೇಳತಾರೆ, ಉಮಾಪತಿಯವರಿಗೆ ಕೊಂಚ ಸ್ಕ್ರೂ ಲೂಸು ಅಂತ. ಆದರೆ ಅವರು ಆಡೋದು ನೋಡಿದ್ರೆ ಕೆಲವು ಸಲ ನನಗನಿಸತ್ತೆ ಮಾಮಲೆ ಇನ್ನೂ ಕೊಂಚ ಸೀರಿಯಸ್ಸೋ ಏನೋ ಅಂತ ಹುಟ್ಟೋವಾಗಲೇನೇ ಒಂದು ಸ್ಕ್ರೂ ಏನಾದರೂ ಮಿಸ್ ಆಗಿರಬಹುದಾ - due to some manufacturing defect ಅಂತ ಆಗಿ ?

ಸುಮಾರು ಆರು ತಿಂಗಳೋ ಏನೋ ಆಗಿರಬೇಕು ಅವರು ರಿಟೈರ್ ಆಗಿ ಮನೇಲಿ ಕೂತುಕೊಳ್ಳೋಕ್ಕೆ ಶುರೂ ಮಾಡಿ. ಮೊದಲು ಮೊದಲು ಒಂದು ಎರಡು ದಿನ ಚೆನ್ನಾಗಿತ್ತೋ ಏನೋ ಆದರೆ ದಿನ ಕಳೆದಹಾಗೆಲ್ಲ ಮನೇಲಿ ಕೂತುಕೊಂಡು ಹ್ಯಾಗೆ ಹೊತ್ತು ಕಳೆಯೋದು ಅನ್ನೋದೇ ಅವರಿಗೆ ದೊಡ್ಡ ಸಮಸ್ಯೆ ಆಗತಾ ಇರತ್ತೆ. ಬೆಳಿಗ್ಗೆ ನಿಧಾನವಾಗಿ ಏಳತಾರೆ, ಸ್ನಾನ ಕಾಫಿ ತಿಂಡಿ ಅನ್ನೋದನ್ನ ಮುಗಿಸ್ಕೊಂಡು ಪೇಪರ್ ಹಿಡಕೊಂಡು ಕೂತುಕೋತಾರೆ. ಓದತಾಓದತಾ ಅವರಿಗೆ ಎಷ್ಟೋ ಸಲ ಹಾಗೇ ನಿದ್ದೆ ಬಂದುಬಿಟ್ಟಿರತ್ತೆ .

ಯಾವಾಗಲಾದರೂ ಹಾಗೆ ನಿದ್ದೆ ಬರದೇ ಇರೋ ಟೈಂನಲ್ಲಿ ಅವರಿಗೆ ಏನಾದರೂ ವಿಶೇಷ BESCOM ನೋರೋ BSNL ನೋರೋ ರಸ್ತೇಲಿರೋ ಮರಗಳನ್ನ ಕಡೀತಿರೋ ವಿಷಯವಾಗಿ Environments ಗಳೋ, ಬೀದಿನಾಯಿ ಮೇಲೆ ಯಾರೋ ಸ್ಕೂಟರ್ ಬಿಟ್ಟರು ಅನ್ನೋದರ ಬಗ್ಗೆ Animal Rights Group ನೋರೋ, ಬೇರೆ ಇನ್ನು ಯಾವುಧಾದರೂ ವಿಷಯ ಹಿಡಕೊಂಡು ಮತ್ತೆ ಯಾರಾದರೂ Awareness Campaign ಮಾಡತಾ ಇದಾರೆ ಅನ್ನೋದು ಕಣ್ಣಿಗೆ ಬೀಳತಾ ಇರತ್ತೆ. ಆವಾಗ ಅವರಿಗೆ ಯಾಕೆ ತಾವೂ ಹಾಗೆ ಏನಾದ್ರೂ ಮಾಡಬಾರದು ಅನ್ನೋದು ಒಂದು ರೀತೀದು ಜೋಷ್ ಬಂದ ಹಾಗೆ ಆಗಿ ಅವರೂ ತಮ್ಮದೇ ಒಂದು one-man crusade ಅನ್ನ ಶುರೂ ಮಾಡಿಕೊಂಡು ಉಟ್ಟಬಟ್ಟೇಲೇ ಹೊರಡತಿರತಾರೆ. ಅಂಥಾ movements ನಡೆಸಕೊಂಡು ಹೋಗಬೇಕಾದ್ರೆ ಏನು organizational set-up ಇರಬೇಕು, ಅವುಗಳ support-base ಹೇಗಿರತ್ತೆ, ಒಬ್ಬನೇ ಒಬ್ಬಂಟಿಗ ಮಾಡೋ ಕೆಲಸವೇ ಅದು ಅನ್ನೋವುಗಳ ಬಗ್ಗೆ ಅವರಿಗೆ ಹಿಂದೆಮುಂದೆ ಏನೂ ಗೊತ್ತಿರೋಲ್ಲ, ಗೊತ್ತು ಮಾಡಿಕೊಳ್ಳೋಕ್ಕೂ ಹೋಗತಿರೋಲ್ಲ. ಹ್ಞ, ಅದೇನು ಅಂಥಾ ಬ್ರಹ್ಮವಿದ್ಯೇನಾ ಅನ್ನೋ ಧೋರಣೆ ಅವರದ್ದು.

ಒಂದು ನಾಕು ದಿನ ಆಗೋ ಹೊತ್ತಿಗೆ ಅವರಿಗೇ ಬೇಜಾರು ಬಂದಿರತ್ತೆ ಇಲ್ಲಾ ಯಾರ ಪತ್ರ್ಯಾನಾದ್ರೂ ಏನಾದ್ರೂ ಅನ್ನಿಸಿಕೊಂಡಿರತಾರೆ, ಹಾಗಾಗಿ ಅದನ್ನ ಕೈಬಿಡತಿರತಾರೆ .

ಆದರೆ ಅವರ ಈ ಕದನ ವಿರಾಮ ಅನ್ನೋದು ಒಂದು ಹದಿನೈದು ದಿನ ಅಷ್ಟೆ -ಆಮೇಲೆ ಯಾವಾಗಲಾದ್ರೂ ತಿಕ್ಕಲು ತಿರುಗಿದಾಗ ಮತ್ತೆ ಶುರೂ ಮಾಡಿಕೊಳ್ಳತಿರತಾರೆ, ಹೊಸದಾಗಿ ಬೇರೆ ಇನ್ನು ಯಾವುದಾದರೂ ಈ ಥರದ್ದು ಹುಚ್ಚುತನಾನ.

★★★

ನಿನ್ನೆ ಬೆಳಿಗ್ಗೆ ನಾನು ಕಾಫಿ ಕುಡೀತಾ ಈಚೆಗೆ ಯಾಕೆ ಉಮಾಪತಿಯವರದ್ದು ಸುದ್ದೀನೇ ಬರತಾ ಇಲ್ಲವಲ್ಲ, ಮೈನಲ್ಲಿ ಹುಷಾರಿಲ್ಲವೋ ಹ್ಯಾಗೆ? ಅಂತ ಅಂದುಕೋತಾ ಇರೋವಾಗ ಯಾರೋ ಬಾಗಿಲು ತಟ್ಟಿದಹಾಗಾಯಿತು.

ಹೋಗಿ ನೋಡಿದ್ರೆ ಉಮಾಪತಿ !

ನೂರು ವರ್ಷ ಆಯಸ್ಸು ಸಾರ್, ನಿಮಗೆ! just now, ನಿಮ್ಮನ್ನ ಜ್ಞಾಪಿಸಕೋತಾ ಇದ್ದೆ

ನನ್ನ ಆಯಸ್ಸು ಎಷ್ಟು ಅಂತ ಕಣಿ ಕೇಳೋಕ್ಕೆ ಬಂದಿಲ್ಲ ನಾನು. ನಿಮ್ಮ ಹತ್ರ ಒಂದು ಮುಖ್ಯವಾದ ವಿಷಯ ಮಾತಾಡೋದಿತ್ತು ಪಕ್ಕದಲ್ಲಿ ಈ ಖಾಲಿ ಸೈಟಿದ್ಯಲ್ಲ ..

ಹುಂ ? ..

ದಿನಾ ರಾತ್ರಿ ಸುತ್ತಮುತ್ತಲಿನೋರೆಲ್ಲ ಮನೇಲಿ ಮಿಕ್ಕಿರೋ ತಂಗಳನ್ನಾನ್ನ ತಂದು ಅಲ್ಲಿ ಸುರೀತಾ ಇರತಾರಲ್ಲ ...

ಹೌದು, ಸಾರ್.. ಬೇಡ ಅಂತ ಎಷ್ಟು ಹೇಳಿದರೂ ಕೇಳೋಲ್ಲ .. ..

ಮಧ್ಯೆ ಮಾತಾಡಬೇಡ್ರಿ... ಆ ತಂಗಳನ್ನಾನ ತಿನ್ನೋಕ್ಕೆ ಹತ್ತೋ ಹದಿನೈದೋ ಹಸಿದ ನಾಯಿಗಳು ಬರತ್ತವಲ್ಲ , ಅವನ್ನೆಲ್ಲಾ ಯಾಕೆ ಕಲ್ಲು ಹೊಡೆದು ಓಡಿಸ್ತಾ ಇರತೀರಿ, ನೀವು?... ಅವೇನು ಪಾಪ, ಯಾವಾಗಲಾದ್ರೂ ನಿಮ್ಮನ್ನ ಅನ್ನ ಕೊಡು ಅಂತ ಕೇಳಿದ್ದವಾ... ಅಥವಾ ನಿಮ್ಮನ್ನ ಕಚ್ಚೋಕ್ಕೆ ಬಂದಿದ್ದವಾ?...

ಇಲ್ಲ

ಮತ್ತೆ ಯಾಕೆ ನೀವು ಪಾಪ ಆ ಮೂಕಪ್ರಾಣಿಗಳಿಗೆ ಕಲ್ಲು ಹೊಡೆದು ಹಿಂಸೆ ಕೊಡತೀರ?...

ಮೂಕಪ್ರಾಣಿಗಳಾ ಸಾರ್ ಅವು.. ಒಂದು ಘಳಿಗೆ ನಿದ್ದೆ ಮಾಡೋಕ್ಕೆ ಬಿಡದೆ ಒಂದೇ ಸಮ ರಾತ್ರಿಯೆಲ್ಲಾ ಬೊಗಳತಿರತ್ತವೆ!..

ಹಾಗಂತ?... ಕಲ್ಲು ಹೊಡೆದುಬಿಡೋದಾ?

ಮತ್ತೆ ಇನ್ನೇನು ಮಾಡಬೇಕು ಅಂತೀರಿ?

ಅದಕ್ಕೇ ಬರತಾ ಇದ್ದೀನಿ.... ಅಲ್ಲಿ ಒಳಗಡೆ ರೂಂನಲ್ಲಿ ಲಂಬೋದರ ಲಕುಮಿಕರ ಅಂತ ಹಾಡತಾ ಇರೋದು ಯಾರು , ನಿಮ್ಮ ಮಗಳಾ?

ಹೌದು, ಯಾಕೆ ಕೇಳತಾ ಇದ್ದೀರಿ?

ಹೆತ್ತೋರಿಗೆ ಹೆಗ್ಗಣ ಮುದ್ದು ಅನ್ನೋ ಥರ ಅವಳು ಹಾಡೋದು ನಿಮ್ಮ ಕಿವೀಗೇನೋ ಇಂಪು ಇರಬಹುದು . ಆದ್ರೆ ಬೇರೆಯವರಿಗೆ? ನಾಯಿ ಬೊಗಳೋ ಥರಾನೂ ಅಲ್ಲ, ಒಳ್ಳೆ ಕತ್ತೆ ಕಿರಚತಿರೋ ಹಾಗಿರತ್ತೆ... ಹಾಗಂತ ಹೇಳಿ ಯಾರಾದ್ರೂ ಅವಳಿಗೆ ಕಲ್ಲು ಹೊಡೆದರೆ ನೀವು ಸುಮ್ಮನೇ ಇರತೀರಾ, ಹೇಳಿ.

ಎಲಾ ಇವನಾ ! ನನ್ನ ಮಗಳು ಸುಗುಣ ಇವನ ಲೆಕ್ಕದಲ್ಲಿ ಹೆಗ್ಗಣಾನ? ಅಲ್ಲೇ ಒದ್ದು ಓಡಿಸಲೇ ಈ ಬೇಕೂಫನ್ನ ಅಂತ ಅನ್ನಿಸತಾ ಇದ್ದರೂ ಸ್ವಲ್ಪ ತಾಳ್ಮೆಯಿಂದಲೇ ಹೇಳಿದೆ -

ಆ ಮಗು ಪಾಪ ಹೊಸದಾಗಿ ಸಂಗೀತ ಕಲೀತಾ ಇದೆ, ಅದಕ್ಕೇ ಹಾಗೆ ಹಾಡತಾಳೆ.. ಅದೇ ಒಂದು ಆರು ತಿಂಗಳು ಟ್ರೇಯ್‌ನಿಂಗ್ ಆದಮೇಲೆ ಬಂದು ನೋಡಿ, ಹ್ಯಾಗೆ ಇರತ್ತೆ ಅವಳ ಕಂಠ ಅನ್ನೋದನ್ನ...

ಅದೇ ಥರ ಈ ನಾಯಿಗಳಿಗೂ ಆರು ತಿಂಗಳು voice ಟ್ರೇಯ್‌ನಿಂಗ್ ಕೊಡಿಸಿದರೆ ನಿಮ್ಮ ಮಗಳ ಥರ ಅವಕ್ಕೂ ಕಂಠ ಸುಧಾರಿಸತ್ತೆ. ಅದು ಬಿಟ್ಟು ಬೊಗಳತ್ತವೆ ಅಂತ ಅವಕ್ಕೆ ಕಲ್ಲು ಹೊಡೆದು ಓಡಿಸಿದ್ರೆ?..

ಅಂದ್ರೆ, ನಾಯಿಗಳಿಗೂ ಮೇಷ್ಟ್ರನ್ನ ಇಟ್ಟು ಸಂಗೀತದ ಪಾಠ ಹೇಳಿಸಬೇಕು ಅಂತೀರ?... This is the limit, Mr. Umapathi! You better get your head examined...

ನಾನು ಹೇಳೋದನ್ನ ಕೊಂಚ ಸಾವಧಾನವಾಗಿ ಕೇಳಿ. ಆಮೇಲೆ ನಿಮಗೇ ಗೊತ್ತಾಗತ್ತೆ ಯಾರಿಗೆ ತಲೆ ಕೆಟ್ಟಿದೆ.. ನಿಮಗೋ ನನಗೋ ಅನ್ನೋದು.. ಅಮೆರಿಕಾದಲ್ಲಿ ಈಗ ಒಂದು ಮೂರು ವರ್ಷದಿಂದ ನಾಯಿಗಳಿಗೂ ಯೋಗ ಹೇಳಿಕೊಡತಾ ಇದಾರಂತೆ, ಅದು ಗೊತ್ತಿದೆಯಾ ನಿಮಗೆ?

ಹಾಗೆ ಅಂತ ಎಲ್ಲೋ ಓದಿದ ಜ್ಞಾಪಕ..

ಈಗ ನೀವೇ ಹೇಳಿ.. ಅಷ್ಟು ಕಷ್ಟದ್ದು ಯೋಗಾನ್ನೇ ಕಲಿಸಬಹುದಂತೆ ಅಂಥಾದ್ರಲ್ಲಿ ಅವುಗಳಿಗೆ ಸಂಗೀತ ಬೇಡ, atleast a better way of communication, instead of barking ಅದನ್ನಾದರೂ ಕಲಿಸೋಕ್ಕೆ ಆಗೋಲ್ಲವಾ?..

ನಾನು ಅಂದುಕೊಂಡೆ ಈ ಗೂಬೆಗೆ ನಿಜವಾಗಲೂ ಹುಚ್ಚು ಹಿಡಿದಿದೆ.. ಅವರಿಗೆ ಬುದ್ಧಿ ಹೇಳತೀನಿ ಅಂತ ಹೋದ್ರೆ, ನನಗೂ ಹುಚ್ಚು ಹಿಡಿಯುತ್ತೆ, ಅಷ್ಟೆ.. ನಾನೂ ಈಗ ಅವರ ಥರ ಹುಚ್ಚನ ಹಾಗೇ ನಡಕೊಂಡು ಅವರನ್ನ ಬೇಗ ಇಲ್ಲಿಂದ ಸಾಗು ಹಾಕೋದು ಜಾಣತನದ ಕೆಲಸ.

ಕಲಿಸಬಹುದು, ಧಾರಾಳವಾಗಿ ಸಂಗೀತಾನ್ನೇ ಕಲಿಸಬಹುದು.. ಆದ್ರೆ ಸಾರ್, ರಸ್ತೆ ರಸ್ತೇಲೂ ಒಂದು ಹತ್ತೋ ಇಪ್ಪತ್ತೋ ನಾಯಿಗಳು ದಿನಾ ಸಂಗೀತ ಹೇಳತಾ ಇದ್ರೆ ಅದು ಎಷ್ಟೇ ಇಂಪಾಗಿರಲಿ ಹಿಂಸೆ ಆಗೋಲ್ಲವೇ?

'ನೀವು ಹಾಗೆ ಕೇಳತೀರಿ ಅಂತ ಗೊತ್ತಿತ್ತು... ಅದಕ್ಕೆ ಇದೆಯಲ್ಲ ಉಪಾಯ... ಶ್ವಾನ ಸಂತಾನ ನಿಯಂತ್ರಣ... Animal Birth Control.. ABC!'

Animal Birth Control? ABC? .. ಅಂದ್ರೆ ಆ CUPA ಅಂತ ಇದ್ಯಲ್ಲ ನಮ್ಮೂರಲ್ಲಿ, ಅದರ ಜತೇಲಿ ನಿಮ್ಮದು ಏನಾದ್ರೂ tie-up ಇದೆಯಾ?

ಆ CUPA, RUPA ಅನ್ನೋವೆಲ್ಲಾ ಯಾಕೆ ಬೇಕು? ನನ್ನದೇ ಒಂದು BUPA - Bhadravathi Hanumanthappa Umapathi Prani Arogyadhama ಅನ್ನೋದನ್ನ ಶುರೂ ಮಾಡಿಕೋತೀನಿ , ಏನು ಹೇಳತೀರ?

BHUPA ತುಂಬಾ ಒಳ್ಳೇ ಹೆಸರನ್ನೇ ಹುಡುಕಿದ್ದೀರಲ್ಲ, ಅದಕ್ಕೆ ಹೇಳಬೇಕು ನಿಮಗೆ ಭಲೇ ಭೂಪ, ಉಮಾಪತಿಯೋರೇ ಅಂತ

ಪ್ಲ, ಪ್ಲಿ... ತುಂಬಾ ಥ್ಯಾಂಕ್ಸ್..

ನಿಮ್ಮ ಈ ಆರೋಗ್ಯಧಾಮಕ್ಕೆ ಬಿಲ್ಡಿಂಗ್ ಬೇಕಲ್ಲ, ಅದಕ್ಕೆ ಏನು ಮಾಡತೀರಿ

ಈ ಸದ್ಯಕ್ಕೆ ಬೇರೆ ಬಿಲ್ಡಿಂಗು ಅನ್ನೋದು ಏನೂ ಬೇಡ... ನಮ್ಮ ಮನೆ ಗಾಡೀಖಾನೇನೇ ಉಪಯೋಗಿಸಿದ್ರೆ ಆಗತ್ತೆ..

ಮತ್ತೆ ಡಾಕ್ಟರುಗಳು?..

ಅದೂ ಅಷ್ಟೇನೇ... Tempo Pickup ಆಗೋ ತನಕ ನಮ್ಮ ಮೂಡಲಯ್ಯ ಇದಾನಲ್ಲ, ಅವನೇ ಸಾಕು

ಮೂಡಲಯ್ಯ ? ..

ಸಾರಿ, ನಿಮಗೆ ಗೊತ್ತಿದೆ ಅದುಕೊಂಡಿದ್ದೆ .. ಅವನು ತಿಪ್ಪಶೆಟ್ಟಿಹಳ್ಳಿ Primary Health Centre ನಲ್ಲಿ Male Nurse ಆಗಿ ಕೆಲಸ ಮಾಡತಾ ಇದಾನೆ. ಈ ಏಪ್ರಿಲ್‌ಗೆ ರಿಟೈರ್ ಆಗತಾ ಇದಾನೆ .

ಈ ABC ಅಂದ್ರೆ ಏನು ಅಂತಾನೇ ಗೊತ್ತಿರೋಲ್ಲವಲ್ಲ ಸಾರ್ ಅವನಿಗೆ ..

ನೀವು ಹೇಳೋದು ಚನ್ನಾಗಿದೆ ! ಹೋದ ವರ್ಷ ಆ ಊರಿಂದು sterilisation camp ನಲ್ಲಿ ಒಂದು ಸಾವಿರಾನೋ ಏನೋ ಜನರಿಗೆ ಆಪರೇಷನ್ನುಗಳು ಆಗತಿದ್ದಾಗ ಈ ಮೂಡಲಯ್ಯಾನೂ ಡಾಕ್ಟರುಗಳ ಜತೇಲಿದ್ದನಂತೆ. ಅವರುಗಳು ಹ್ಯಾಗೆ ಆಪರೇಷನ್ ಮಾಡತಾರೆ ಅನ್ನೋದನ್ನ ನಿಗಾ ಇಟ್ಟು ನೋಡಿಕೊಂಡಿದ್ದಾನಂತೆ.. ಬಡ್ಡಿಮಗ ಬಲೆ ಚುರುಕು.. ಒಂದು ನಾಕು ಸಲ ಏನಾದ್ರೂ ನೋಡಿದ್ರೆ ಸಾಕು, ಛಕ್ ಅಂತ ಕಲಿತುಕೊಂಡ್ ಬಿಡತಾನೆ

ಇವರು ಯಾಕೋ ಹೆಂಡ ಕುಡಿಯೋ ದೇವರು ಅಂತಾರಲ್ಲ, ಹಾಗೆ ಆಡತಾ ಇದಾರೆ .. ಈಗ ನಾನು ಇವರಿಗೆ ದನ ತಿನ್ನೋ ಪೂಜಾರಿ ಅಂತ ಆಗದೆ ಬೇರೆ ಮಾರ್ಗಾನೇ ಇಲ್ಲ ಅಂದುಕೊಂಡು ಅವರನ್ನ ಕೇಳಿದೆ.

ಬಹಳ ಸಂತೋಷ ಸಾರ್. ಆದರೆ ಒಂದು ವಿಷಯ.. ಆ ನಾಯಿಗಳ ಮೇಲೆ ಈ Animal Birth Control ಆಪರೇಷನ್ ಅಂತ ಮಾಡೋಕ್ಕೆ ಮುಂಚೆ ಅದು ಅವುಗಳಿಗೆ ಒಪ್ಪಿಗೇನೋ ಇಲ್ಲವೋ ಅನ್ನೋದನ್ನ ಹ್ಯಾಗೆ ತಿಳಕೋತೀರಿ ?

ಸರೀ ಹೋಯ್ತು .. ಅದನ್ನ ಯಾವನು ಕೇಳೋಕ್ಕೆ ಹೋಗತಾನೆ ? ಕೇಳಿದ್ರೂ ಆ ಮುಂಡೇವಕ್ಕೆ ಏನು ಗೊತ್ತಾಗತ್ತೆ , ಆ ಆಪರೇಷನ್ನು ಯಾಕೆ ಮಾಡತಿದಾರೆ , ಆದರಿಂದ ಮುಂದೆ ಏನಾಗಬಹುದು ಅನ್ನೋದೆಲ್ಲಾ ?

ಅಲ್ಲೇ ಸಾರ್ ನೀವು ತಪ್ಪು ಮಾಡತಾ ಇರೋದು .. ನಾಳೆ ದಿನ ಯಾರಾದ್ರೂ ನಿಮಗೆ ಆಗದೆ ಇದ್ದೋರು ಅದೇ ವಿಷಯಾನ್ನ ಹಿಡಕೊಂಡು ಕೋರ್ಟ್‌ಗೆ ಹೋಗಿ ನಿಮ್ಮ ಮೇಲೆ stay order ತರಬಹುದಲ್ಲ !

ಯಾವ basis ಮೇಲೆ ಅವರು stay ತೊಗೋಬಹುದು ಅಂತೀರಿ ? ..

ಅವರು ಹೇಳಬಹುದು ಮನುಷ್ಯ ಜಾತಿ ನಾಮಗಿರೀನೇ ಇರಬಹುದು, ಪ್ರಾಣಿಜಾತಿ

ನಾಯಿಮರೀನೇ ಇರಬಹುದು... ಆದರೆ ಹೆಣ್ಣು ಹೆಣ್ಣೇ ಅಲ್ಲವೇ? ತಾಯ್ತನದ ಹಂಬಲ ಇರೋಲ್ಲವೇ? ಆ ಹಂಬಲ, ಆ ಹಕ್ಕು, ಅದನ್ನ ಇವರು ಕಿತ್ತುಕೋತಾ ಇದಾರೆ , ಅದೂ ಅವುಗಳ ಒಪ್ಪಿಗೆ ಇಲ್ಲದಿರಾನೇ ಅಂತ.


ಅಂದರೆ ಅವರುಗಳು ಹೇಳೋದು .. ಆ ನಾಯಿಗಳನ್ನ ನೋಟರಿ ಎದುರಿಗೆ ಕರಕೊಂಡು ಹೋಗಿ ಅಫಿಡವಿಟ್ ಮಾಡಿಸ್ಕೊಂಡು ಬಂದಿರಬೇಕು ಅಂತಾನಾ?

ಒಂದು ನಾಕು ದಿನ ಹೋದ್ರೆ, ಹಾಗೆ ಹೇಳಿದ್ರೂ, ಹೆಚ್ಚಲ್ಲ .. ಈಗ ಸದ್ಯಕ್ಕೆ ಅವರು ಹೀಗೆ ಹೇಳಬಹುದು ನಾಯಿಗಳು ಜಮಾನಾ ಕಾಲದಿಂದ come ಅಂದರೆ ಬರೋದು, go ಅಂದರೆ ಹೋಗೋದು, sit ಅಂದರೆ ಕೂತುಕೊಳ್ಳೋದು ಅನ್ನೋವನ್ನೆಲ್ಲಾ ಮಾಡಿಕೊಂಡು ಬರತಾ ಇವೆಯಲ್ಲ , ಈಗ ಅದೇ ಆ ನಾಯಿಗಳನ್ನ sterilisation - OKAY? NOT OKAY ಅಂತ ನಯವಾಗಿ ಕೇಳಿದರೆ... OKAY ಅನ್ನೋದಿದ್ರೆ ಬಾಲ ಅಲ್ಲಾಡಿಸೋದು... NOT OKAY ಅಂತ ಇದ್ರೆ, ತಲೆ ಅಲ್ಲಾಡಿಸೋದು ಮಾಡಬಹುದಲ್ಲ ! .. ಅದು try ಮಾಡೋದು ಬಿಟ್ಟು ...

ಥತ್, ಎಂಥಾ ಜನಗಳು ನೋಡಿ .. ತಾವೂ ಮಾಡೋಲ್ಲ , ಇನ್ನೊಬ್ಬರನ್ನೂ ಮಾಡೋಕ್ಕೆ ಬಿಡೋಲ್ಲ. ಒಂದು ಸಲ ಅವರು stay order ತೊಗೊಂಡರು ಅಂದ್ರೆ, ಮುಗೀತು... ಅದು vacate ಆಗೋಹೊತ್ತಿಗೆ ಕಲಿಯುಗ ಮುಳುಗೇ ಹೋಗಿರತ್ತೆ .. ಹ್ಮ್ಂ, ಏನು ಮಾಡೋದು? ಈ ನನ್ನ BHUPA ಅನ್ನೋದನ್ನ ಇಲ್ಲಿಂದ ಹೋಗೋವಾಗ ತೊಗೊಂಡು ಹೋಗಿ ಎಲ್ಲಾದರೂ ಕೂಪ, ದೊಡ್ಡ ಹಳ್ಳ, ಸಿಕ್ಕಿದ್ರೆ ಹಾಕಿಬಿಟ್ಟು ಮನೇಗೆ ಹೋಗತೀನಿ. ಊರ ತುಂಬಾ ಇಂಥಾ ಜನರನ್ನ ಇಟ್ಟುಕೊಂಡು ದೊಡ್ಡದಾಗಿ ಏನೋ ಮಹಾ ಸಾಧಿಸ್ತೀನಿ ಅಂತ ಹೋಗತಿರತೀನಲ್ಲ, ಶಿವನೇ ಅಂತ ಮನೇಲಿ ಕೂತಿರೋ ಬದಲು ! ನನಗೆ ಬುದ್ಧಿ ಇಲ್ಲ ಅಷ್ಟೆ.

ಅದನ್ನ ಇವತ್ತಾದರೂ ಒಪ್ಪಿಕೊಂಡಿರಲ್ಲ ಅಂದುಕೊಂಡೆ.

ಆಟೋ ಮಿಟರ್ ಏನಯ್ಯ ಇದು ನನ್ನತದಾನೇ ಹಾರ್‍ತಾ ಇದೆ....
ಬೆಂಗಳೂರು ಅಂದ್ರೆ ಫಾಸ್ಟ್ ಅಂದದ್ದು ಇದಕ್ಕೇನಾ.... ಶ್ರೀರಾಮ... ಶ್ರೀ ರಾಮ



ವಿದ್ಯಮಾನಗಳು

- ಶು.ಶ.

ನಮ್ಮ ದೇಶದಲ್ಲಿ ಅತ್ಯಂತ ಕೆಟ್ಟ ಎನಿಸಿದ್ದ ಸುದ್ದಿ ಕೇಳಿದ ಕೆಲವೇ ದಿನಗಳಲ್ಲಿ ಅದಕ್ಕಿಂತ ಕೆಟ್ಟ, ಸುದ್ದಿ ಬಂದೇ ಬರುತ್ತದೆ. ನಿನ್ನೆ ಅತಿ ದಾರುಣ ಎನ್ನಿಸಿದ್ದ ಘಟನೆಗಳನ್ನು ಮರೆಯುವಷ್ಟರಲ್ಲಿಯೇ ಇವತ್ತು ದೆಹಲಿ ಪಕ್ಕದ ನೊಯ್ಡಾ ಪಕ್ಕದ ನಿಠಾರಿ ಹೆಸರಿನ ಹಳ್ಳಿಯಲ್ಲಿ ಮೂವತ್ತು ಕಡುಬಡವರ ಮಕ್ಕಳು ಕಾಣೆಯಾಗಿ ಅದರಲ್ಲಿ ಹಲವಾರು ಮಕ್ಕಳ ಅಸ್ಥಿಪಂಜರ, ಮೂಳೆಗಳು, ಅವರು ಧರಿಸಿದ್ದ ಉಡುಪು ಎಲ್ಲಾ ಹತ್ತಿರದ ಬಂಗಲೆಮನೆಯಲ್ಲಿ ಪತ್ತೆಯಾಗುತ್ತಿರುವುದು ಕ್ರೂರದಲ್ಲಿ ಕ್ರೂರ ಸುದ್ದಿ. ಇದೆಲ್ಲಾ ಯಾರಿಂದ, ಏಕೆ, ಹೇಗೆ ಇನ್ನೂ ಪೂರ್ತಿ ಗೊತ್ತಿಲ್ಲದಿದ್ದರೂ ಇದು ಇಡೀ ದೇಶವೇ ನಾಚಬೇಕಾದ ಘಟನೆ ಎನ್ನುವುದರಲ್ಲಿ ಅನುಮಾನವಿಲ್ಲ.

ಜನರ ಯೋಗಕ್ಷೇಮದ ಹೊಣೆಹೊತ್ತ ಪೋಲೀಸರು ಒಂದೂವರೆ ವರ್ಷದಿಂದ ಏನು ಮಾಡುತ್ತಿದ್ದರು? ಅಲ್ಲಿನ ಎಂಎಲ್‌ಎ, ಎಂಪಿ ಬಾಯಲ್ಲಿ ಕಡುಬು ಕಚ್ಚಿಕೊಂಡಿದ್ದರೆ? ಆ ರಾಜ್ಯದ ಸರ್ಕಾರ ನಿದ್ದೆಮಾಡುತ್ತಿತ್ತೇ?- ಕೇಳಲೇ ಬೇಕಾದ ಈ ಪ್ರಶ್ನೆಗಳನ್ನು ಸುದ್ದಿ ಮಾಧ್ಯಮಗಳು ಕೇಳುತ್ತಿವೆ. ನಮ್ಮ ದೇಶದಲ್ಲಿ ಈಗ ದಿನದ 24 ಇಪ್ಪತ್ತುಗಂಟೆ ಸುದ್ದಿ ಪ್ರಸಾರ ಮಾಡುವ 30-40 ಚಾನಲ್ಲುಗಳಿವೆಯಂತೆ. ಈ ಎಲ್ಲಾ ಚಾನಲ್ಲುಗಳ ಅತಿ ಚಾಲೂಕಿನ ಚುರುಕು ಮೂಗಿನ (ಅದಕ್ಕಿಂತ ಚುರುಕು ನಾಲಿಗೆಯ) ಸಾವಿರಾರು ವರದಿಗಾರರಿದ್ದಾರೆ. ಇವರಲ್ಲಿ ಒಬ್ಬಳಿಗೂ/ಒಬ್ಬನಿಗೂ ಇಂತಹ ಸುದ್ದಿಯ ವಾಸನೆ ಏಕೆ ಸಿಗಲಿಲ್ಲ? ಇವರೆಲ್ಲರಿಗೂ ಸಾಮೂಹಿಕ ನೆಗಡಿಯಾಗಿತ್ತೆ? ಅಥವ ಈ ಕಾನ್ವೆಂಟ್ ಎಜುಕೇಟೆಡ್ ಜನರಿಗೆ ಬಡವರ ವಾಸನೆಗಳು ಅಲರ್ಜಿಯೇ? ಮಾಧ್ಯಮಗಳ ಮಂದಿ ಕೇಳುತ್ತಿರುವ ಪ್ರಶ್ನೆಗಳಿಗೆ ನಾವು ಸೇರಿಸಬೇಕಾದ ಇನ್ನಷ್ಟು ಪ್ರಶ್ನೆಗಳು.

★★★

ರಾಜಕೀಯದಲ್ಲಿ ಒಂದು ವಾರ ತೀರಾ ದೀರ್ಘ, ಇಷ್ಟರಲ್ಲಿ ಏನು ಬೇಕಾದರೂ ಆಗಬಹುದು ಎನ್ನುತ್ತಾರೆ. ಅಂತಹುದರಲ್ಲಿ ಒಂದು ವರ್ಷ - ಐವತ್ತೆರಡು ವಾರಗಳು ಅಧಿಕಾರ ಉಳಿಸಿಕೊಂಡಿರುವ ಮುಮಂ ಕುಮಾರರನ್ನು ಅಭಿನಂದಿಸಲೇ ಬೇಕು. ಅತ್ತ ಪುಲಿ ಇತ್ತ ದರಿ ಎನ್ನುವ ಆಯ್ಕೆಯಿದ್ದಾಗ ಪುಲಿಯನ್ನೇ ತಬ್ಬಿಕೊಳ್ಳುವ ಧೈರ್ಯ ತೋರಿಸಿದ ಸಿಎಂ ಎದುರಿಸಿದ ಸಮಸ್ಯೆ ಒಂದೇ ಎರಡೇ? ಅಪ್ಪನ (ನಿಜ ಅಥವ ನಟನೆಯ) ಕೋಪ, ಅಣ್ಣಂದಿರ ಎಲ್ಲದರಲ್ಲೂ ಮೂಗುತೂರಾಟ, ಜಮೀರ್ ಚನ್ನಿಗರಂತಹ ಸ್ನೇಹಿತರು, ಮಿತ್ರ ಪಕ್ಷದವರ ಕ್ಷಣ ಚಿತ್ತಂ- ಕ್ಷಣ ಪಿತ್ಥಂ, ಅತೃಪ್ತ ಶಾಸಕರು, ಹಿರಿಯ-ಕಿರಿಯ ಅಧಿಕಾರಿಗಳ ಅಸಹಕಾರ, ಡಿಕೆಶಿಯಂತಹ ಕಾಂಗ್ರೆಸಿಗರ ಹುನ್ನಾರಗಳು, ಖರ್ಗೆ-ಧರಂಗಳ ಸರ್ಕಾರ ನಾಳೆ ಬೀಳುತ್ತದೆ ಎನ್ನುವ ನಿತ್ಯ ಭವಿಷ್ಯ, ಬಳ್ಳಾರಿ ಗಣಿಲಂಚ, ಬಾಬಾಬುಡನ್‌ಗಿರಿ ಶೋಭಾಯಾತ್ರೆ,

ಚಾಮುಂಡೇಶ್ವರಿ ಚುನಾವಣೆ- ಇಷ್ಟೊಂದು ಕಂಟಕಗಳ ನಡುವೆ ಅಧಿಕಾರ ಇನ್ನೂ ಉಳಿಸಿಕೊಂಡಿರುವುದು ದೊಡ್ಡ ಸಾಧನೆಯಲ್ಲವೇ? ಕುಮಾರಣ್ಣನಿಗೆ ಹಾರ್ದಿಕ ಅಭಿನಂದನೆಗಳು.

★★★

ಕೊರವಂಜಿ ಅಪರಂಜಿ ಟ್ರಸ್ಟ್ ಹನ್ನೆರಡು ವರ್ಷಗಳ ಹಿಂದೆ ನಡೆಸಿದ ಮೊದಲ ಹಾಸ್ಯೋತ್ಸವ ಆಗ ಪತ್ರಿಕೆಯಲ್ಲಿ ಸುದ್ದಿಯಾಯಿತೋ ಇಲ್ಲವೋ ಗೊತ್ತಿಲ್ಲ. ಆದರೆ ಅದು ನಗರದಲ್ಲಿ ಏಕೆ ಕರ್ನಾಟಕದಲ್ಲಿಯೇ- ಸದಭಿರುಚಿಯ ಹಾಸ್ಯ ಹರಡುವ ಹೊಸ ಪರಂಪರೆ ನಿರ್ಮಿಸಿದ trend setting ವಿದ್ಯಮಾನವಾಯಿತು. ಮುಂದಿನ ವರ್ಷಗಳಲ್ಲಿ ಸಿಎಂ ಕೃಷ್ಣ, ರಾಜ್ಯಪಾಲ ಕೃಷ್ಣ ಹಾಸ್ಯೋತ್ಸವಕ್ಕೆ ಬಂದು ಮುಕ್ತವಾಗಿ ನಕ್ಕಿದ್ದು ಪತ್ರಿಕೆಗಳಲ್ಲಿ ಮೊದಲಪುಟದ ಸುದ್ದಿಯಾಯಿತು. ಈಗಿನ ನಮ್ಮ ಮುಖ್ಯಮಂತ್ರಿಗಳು - in absentia ಡಿಸಂಬರ್ 25ರ ಹಾಸ್ಯೋತ್ಸವವನ್ನು ಮತ್ತೆ ಮೊದಲಪುಟದ ಸುದ್ದಿ ಮಾಡಿದ್ದಾರೆ. ಪತ್ರಿಕೆಗಳಲ್ಲಿ ಬಂದ ಅರೆಬರೆ ವರದಿಗಳನ್ನು ಓದಿದ ಅವರಿಗೆ ತಕ್ಷಣ ಕೋಪ ಬಂದಿರಬಹುದು. ಆದರೆ ನಿಧಾನವಾಗಿ ತಮ್ಮ ಕೋಪ ಅಕಾರಣ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ನಮ್ಮ ರಾಜಕಾರಣಿಗಳು ಮಾಡಬೇಕಾದ್ದನ್ನು ಮಾಡದೇ, ಮಾಡಬಾರದ್ದನ್ನು ಮಾಡುತ್ತಾ ದೇಶದ ಪ್ರಜೆಗಳನ್ನು 364 ದಿನಗಳು ಅಳಿಸುತ್ತಿರುವಾಗ ಇದೇ ಪ್ರಜೆಗಳು ಇದೇ ರಾಜಕಾರಣಿಗಳನ್ನು ನೋಡಿ ವರ್ಷದಲ್ಲಿ ಒಂದೇ ಒಂದು ದಿನ ನಕ್ಕರೆ ಯಾವುದೇ ತಪ್ಪಿಲ್ಲ ಎನ್ನುವಷ್ಟು ಹಾಸ್ಯಪ್ರಜ್ಞೆ ಉಳಿಸಿಕೊಂಡಿರುವುದಕ್ಕೆ -ಭಲೇ ಸಿಎಂ!

★★★

ನಿನ್ನೆಯ ಹೀರೋ ಇವತ್ತು ಜೀರೋ ಎನ್ನುವ ಮಾತಿಗೆ ಅತ್ಯುತ್ತಮ ಉದಾಹರಣೆ ಇಂಗ್ಲೀಷ್ ಕ್ರಿಕೆಟ್ ಟೀಮ್. ಮೊನ್ನೆ ಮೊನ್ನೆ ಹದಿನೇಳು ವರ್ಷಗಳ ಸತತ ಸೋಲಿನ ನಂತರ ಮೊದಲ ಬಾರಿಗೆ ಆಸ್ಟ್ರೇಲಿಯಾ ಮಣಿಸಿ ತಮ್ಮ ಕ್ರಿಕೆಟ್ ತಂಡ ಬೂದಿಕರಂಡ ಗೆದ್ದಾಗ ಆ ದೇಶದ ಜನ ಖುಷಿಯಿಂದ ಕುಣಿದು, ಕುಡಿದು ಹಬ್ಬ ಆಚರಿಸಿದ್ದರು. ಕಾಂಗರೋಗಳ ದಾದತನದಿಂದ ಬೇಸತ್ತಿದ್ದ ಎಲ್ಲಾ ಕ್ರಿಕೆಟ್ ಅಭಿಮಾನಿಗಳೂ ಆಗ ಸಂತೋಷಪಟ್ಟಿದ್ದರು. ಆದರೆ ಇವತ್ತು ಇದೇ ಇಂಗ್ಲೆಂಡ್ ಪಂಗಡಕ್ಕೆ ಐದೂ ಟೆಸ್ಟುಗಳಲ್ಲೂ ಹೀನಾಯ ಸೋಲು, ಇಪ್ಪತ್ತು20ರಲ್ಲಿ ಭಾರೀ ಅಪಜಯ, ಏಕದಿನ ಪಂದ್ಯಗಳಲ್ಲಿ ಶೂನ್ಯಸಂಪಾದನೆಯ ಸೂಚನೆ. ಆ ಎತ್ತರದಿಂದ ಈ ಆಳಕ್ಕೆ ಬಿದ್ದಿರುವ ಕ್ರಿಕೆಟ್ಟಿಗೆ ನಮ್ಮ ಹಾರ್ದಿಕ ಸಂತಾಪಗಳು. ಇಲ್ಲೂ ಒಂದು ಸಂತೋಷದ ಗೆರೆಯಿದೆ. ಇದರಿಂದ ರಾಹುಲ್ ದ್ರಾವಿಡ್ ಪಡೆ ಬಾಟಮ್‌ಮೋಸ್ಟ್ ಎನ್ನಿಸಿಕೊಳ್ಳುವುದು ತಪ್ಪಿದೆ, ಭಾರತದ ಕೆಳಗೂ ಈಗ ಇನ್ನೊಂದು ಪಂಗಡವಿದೆ!

★★★

ಉಕ್ತಿ - ಚಾಟೋಕ್ತಿ

- ಎನ್. ರಾಮನಾಥ್

ಬಡವರ ಸರ್ವರೋಗ ಚಿಕಿತ್ಸೆಗೆ ನೆರವಾಗಲು ಪ್ರಾಣದಾನ ಯೋಜನೆ ಮು.ಮಂ.

ಬಡವರ ರೋಗಕೆ ಹಣವನು ಪಡೆಯದೆ ಔಷಧ ನೀಡುವ ಜನರಿಲ್ಲ
ಯೋಜನೆ ರೂಪಿಪ ಕಾಗದದಿಂದಲಿ ರೋಗ ನಶಿಸುವುದು ದಿಟವಲ್ಲ.

★★★

ಅವಾಚ್ಯ ನಿಂದನೆ: ಏ.ಸಿ.ಪಿ.ಗೆ ನೋಟೀಸ್ - ಸುದ್ದಿ.

ಶ್ವಾನಕೆ ಬೊಗಳಿಕೆ ನರಿ ಊಳಿಡುವಿಕೆ ಜನ್ಮಕೆ ಅಂಟಿದ ರೀತಿಗಳು
ಅಂತೆಯೆ ಏ.ಸಿ.ಪಿ. ಅವಾಚ್ಯ ಶಬ್ದದಿ ನುಡಿಗಳನಾಡ್ವುದೆ ಸರಿ ಕ್ರಮವು

★★★

ಅಸ್ಸಾಂ ನಲ್ಲಿ ಉಗ್ರರೆಂದು ಭಾವಿಸಿ ಮೂವರು ವ್ಯಾಪಾರಿಗಳ ಹತ್ಯೆ - ಸುದ್ದಿ.

ವ್ಯಾಪಾರದೊಳೂ ಭಯವನು ಹುಟ್ಟಿಪ ಬೆಲೆಗಳ ಹೇಳುವ ಜನರೇನು?
ತತ್ಕಾರಣದಿಂ ಉಗ್ರರು ಎನ್ನುತ ಹತ್ಯೆಯ ಗೈದರೆ ಪೋಲಿಸರು?

★★★

ಸಚಿವರ ಖಾತೆಗಳು ಬದಲಾಗಲಿವೆ - ಸುದ್ದಿ.

ಬದಲಾದರೆ ಖಾತೆಗಳೇಂ ಭಾಗ್ಯವು ಬದಲಾಗದಿರಲು ಮನಸ್ಥಿತಿಯು
ತಲೆ ಬದಲಾದರು ಕೈ ಬದಲಿಲ್ಲವು ಅದುವೇ ಲಂಚದ ಫಲಶ್ರುತಿಯು.

★★★

ಬ್ರಿಟಿಷಳಿಂದ ಶಿಲ್ಪಾಶೆಟ್ಟಿಗೆ ವರ್ಣರಂಜಿತ ನಿಂದನೆ - ಸುದ್ದಿ.

ಬ್ರಿಟಿಷರು ಭಾರತ ದೇಶದ ಜನತೆಯ ತುಚ್ಛದಿ ಕಾಣ್ವುದು ಪೊಸತಲ್ಲ
ಚಂದದಿ ಒದ್ದರು ಎನ್ನುತ ನಾವ್ಗಳು ಅವರಂ ಮೆಚ್ಚುದ ಬಿಟ್ಟಿಲ್ಲ.

★★★

ಗೂಢಚಾರರಿಗೆ ಮೊಬೈಲ್ ಭತ್ಯೆ ಇಲ್ಲ - ಸುದ್ದಿ.

ಪತ್ತೆಯ ಕಾರ್ಯದಿ ತೊಡಗಿಹ ಜನರಿಗೆ ಇಂತಹ ತೊಂದರೆ ಏಕಣ್ಣಾ
Land line ತಲುಪುತ ಕರೆ ಮಾಡ್ವವರೆಗೆ ಶಕ್ಕ ನಿಲ್ಲುವನೆ ಹೇಳಣ್ಣಾ

★★★

ಹಣ ಗಳಿಕೆಯೇ ಆಸ್ಪತ್ರೆಗಳ ಗುರಿಯಾಗದಿರಲಿ - ಸಚಿವ ಮುನಿಯಪ್ಪ.

ಹಣವು ನಮಗೆ ಮುಖ್ಯವಲ್ಲ ಬೇರೆ ವಸ್ತುಗಳಿಹವಲ್ಲ ಅವುಗಳಿಂದ ಬಾಳ್ವೆನಮದು ಎಂದ ವೈದ್ಯನು
ಮೂತ್ರಪಿಂಡ ಕಣ್ಣುಗುಡ್ಡೆ ಚರ್ಮ ಮತ್ತು ಇತರೆ ಅಂಗ ಕೊಡಲಿ ಸಾಕು ಹಣವೆ ಬೇಡ ಎನ್ನುತಿದ್ದನು

★★★

ಸದ್ದಾಂ ಹತ್ಯೆ ಪ್ರತಿಭಟಿಸಿ ಶಿವಾಜಿನಗರದಲ್ಲಿ ಬಸ್ಸಿಗೆ ಬೆಂಕಿ - ಸುದ್ದಿ.

ಎಲ್ಲಿಯೊ ಯಾರನೊ ಕೊಲೆಯಂ ಗೈದರೆ ಇಲ್ಲಿಯ ಬಸ್ಸನು ಸುಡುವವರು
ತಮ್ಮದೆ ಜಾಗದಿ ನಡೆಯುವ ಮೋಸವ ಕಂಡೂ ಕಾಣದೆ ತೆರಳುವರು

★★★

ಅಮೇರಿಕೆಯಲ್ಲಿ ಹುಗ್ಗಿ....

– ಗೋಪಾಲಿ

ಅಪರೂಪಕ್ಕೆ ಒಂದು ಒಳ್ಳೆಯ ಪ್ರವಾಸ ಕಥನ ಮೊನ್ನೆ ಕೈಗೆ ಸಿಕ್ಕಿತು. ಬಳ್ಳಾರಿಯಲ್ಲಿನ ಶ್ರೀಮತಿ ಜಲಜಾ ಗಂಗೂರ್ ಅವರು ದೇವರ ನಾಮ ಹಾಗೂ ಪ್ರಾರ್ಥನೆಯ ಗೀತೆಗಳನ್ನು ಬರೆದು ಹೆಸರು ಮಾಡಿದವರು. ಅಮೇರಿಕೆಯಲ್ಲಿನ ಮಗನ ಸಂಸಾರವನ್ನು ಭೇಟಿಮಾಡಲು ಅಲ್ಲಿಗೆ ತಮ್ಮಪತಿರಾಯರ ಸಂಗಡ ಭೇಟಿ ನೀಡಿದ ಇವರು ಯಾವುದೇ ಇಂಥಹ ಒಂದು ಕೃತಿಯನ್ನು ರಚಿಸುವ ಯಾವುದೇ ಮುಂದಾಲೋಚನೆಯಿಲ್ಲದೇ ಹೋದವರು ಮತ್ತು ಈ ದೃಷ್ಟಿಯಿಂದ ಬರಹ ಫ್ರೆಷ್ ಆಗಿದೆ. ಅಲ್ಲದೇ ಹಳ್ಳಿಗಾಡಿನ ಭಾರತದ ಅಷ್ಟೇನೂ ವಿದ್ಯಾಭ್ಯಾಸ ಹೊಂದಿರದ ಮಧ್ಯಮ ದರ್ಜೆಯ ಮುಗ್ಧ ಮಹಿಳೆಯೊಬ್ಬರು ತಮ್ಮ ಇತಿಮಿತಿಯಲ್ಲಿ ಅಮೇರಿಕವನ್ನು ನೋಡಿದ ಅನುಭವ ಇಲ್ಲಿ ದಾಖಲಾಗಿದೆ.

ಅಮೇರಿಕೆಗೆ ಹೊರಡಲೇ ಬೇಕಾಗಿರುವ ಸಂದರ್ಭದೊಂದಿಗೆ ಕಥಾನಕ ಆರಂಭಗೊಂಡು ಇಲ್ಲಿ ವೀಸಾ ದೊರಕಿಸಿಕೊಂಡಿದ್ದು,ಪ್ರಯಾಣಕ್ಕೆ ಬೇಕಾದ ಸಿದ್ಧತೆ ನಡೆಸಿದ್ದು ರಾಘವೇಂದ್ರಸ್ವಾಮಿಗಳ ಮೃತ್ತಿಕೆ ಸಂಗ್ರಹ ಮೊದಲಾದ ವಿವರಗಳನ್ನು ನೀಡಿ ನಂತರ ಅಮೇರಿಕೆಯಲ್ಲಿ ಬಿಚ್ಚಿಕೊಳ್ಳುತ್ತದೆ. ಲೇಖಕಿಯ ಮುಗ್ಧತೆ ಎದ್ದು ಕಾಣುವುದು ಅವರು ಬೆರಗುಗಣ್ಣಿನಿಂದ ಅಮೇರಿಕವನ್ನುನೋಡನೋಡುತ್ತಾ ತಮ್ಮ ಆರಾಧ್ಯ ದೈವ ಕಡಲಬಾಳು ರಾಘವೇಂದ್ರಸ್ವಾಮಿಗಳನ್ನು,ತಮ್ಮ ಮಠವನ್ನು ನೆನೆಸಿಕೊಳ್ಳುತ್ತಾ ಇದೆಲ್ಲಾ ಆ ರಾಯರ ಇಚ್ಛೆ ಎಂದು ನಂಬುವ ರೀತಿಯಲ್ಲಿ ಯಾವುದೋ ಪ್ರದೇಶದ ವಿವರಕ್ಕೆ ಬಂದಾಗ ಇದರ ಹೆಸರು ಆಮ್ಸ್ಟರ್ ಡ್ಯಾಂ,ಇದು ಡಚ್ ರಾಜ್ಯದ ರಾಜಧಾನಿಯಂತೆ ಎಂದು ಲೇಖಕಿ ವಿವರಿಸುವ ರೀತಿ ಮನೆಯಲ್ಲಿನ ಹಿರಿಯ ಅಜ್ಜಿ ಮೊಮ್ಮಕ್ಕಳನ್ನು ಕೂಡಿಸಿಕೊಂಡು ಅಪ್ಸರೆಯ ಕತೆ ಹೇಳುವುದನ್ನು ನೆನಪಿಗೆ ತರುತ್ತದೆ. ನಮ್ಮೂರಿನಲ್ಲಿ ಮಾಡಿದಷ್ಟು ಮಡಿ ಹುಡಿ ಇಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಎಂಬುವ ವ್ಯಥೆ ಕೃತಿಯ ಉದ್ದಕ್ಕೂ ಎದ್ದು ತೋರುತ್ತದೆ.

ಕೈಚೀಲದ ತಪಾಸಣೆ ವಿಭಾಗಕ್ಕೆ ಅಜ್ಜಿ ಹೋಗುತ್ತದೆ. ಅಲ್ಲಿ ತಪಾಸಿಸುವವರು ದೇಹದ ಪ್ರತಿಯೊಂದು ಅಂಗವನ್ನು ಮುಟ್ಟಿ ಮುಟ್ಟಿ ತಪಾಸಿಸಿದರು. ಇದು ಮನಸ್ಸಿಗೆ ಬಲು ಮುಜುಗರವಾಗುತ್ತದೆ. ನಾಚಿಕೆ ಅನಿಸುತ್ತದೆ.ಹೆಂಗಸರಿಗೆ ಹೆಂಗಸರು,ಗಂಡಸರಿಗೆ ಗಂಡಸರು ಪರೀಕ್ಷೆ ಮಾಡಲು ಇರುತ್ತಾರೆ.ಆದರೂ ನಮ್ಮಂಥಹ ಸಂಪ್ರದಾಯಸ್ಥರಿಗೆ ಇದೆಲ್ಲಾ ಬಹಳ ಸಂಕೋಚವಾಗುತ್ತದೆ.ಅನಿವಾರ್ಯ,ಇದೆಲ್ಲಾ ಅನುಭೋಗಿಸಲೇ ಬೇಕು..... ಈ ರೀತಿಯ ಅನುಭವದ ಮಾತು ಪ್ರತಿಪೇಜಿನಲ್ಲೂ ಇದ್ದು ನಮ್ಮ ತುಟಿ ಬಿರಿಯುವಂತೆ ಮಾಡುತ್ತದೆ.ಆದರೆ ಬೇರೊಬ್ಬರ ತುಟಿಬಿರಿಯುತ್ತಿದೆ ಎಂಬ ಪರಿವೆಯೂ ಅಜ್ಜಿಗಿಲ್ಲ! ನಲವತ್ತೆರೆಡು ವರ್ಷದ ಹಿಂದೆ ಮದುವೆಯಾದಾಗ ಕುಷ್ಟಗಿಯಿಂದ ಹನುಮಸಾಗರಕ್ಕೆ ಗಂಡ ಹೆಂಡತಿ ಎತ್ತಿನ ಬಂಡಿಯಲ್ಲಿ ಪ್ರಯಾಣಿಸಿದ್ದ

ನೆನಪು ಈಗ ಇಂದಿನ ವಿಮಾನಯಾನದಲ್ಲಿ ಬರುತ್ತಿದೆ–ಇದು ಮಧುಚಂದ್ರ ವಿಹಾರದಂತೆ ತೋರುತ್ತದೆ.

ಪುಸ್ತಕ ಮುಂದುವರೆದಂತೆ ಅಮೇರಿಕದಲ್ಲಿ ಇವರು ಪ್ರವಾಸಕ್ಕೆ ಹೊರಟಾಗಲೆಲ್ಲಾ ಮಾಡಿಕೊಂಡು ಡಬ್ಬಿಯಲ್ಲಿ ತುಂಬಿಕೊಂಡು ಹೋಗುತ್ತಿದ್ದ ಅವಲಕ್ಕಿ, ಹುಗ್ಗಿ ವಿವರ ಸಿಗುತ್ತದೆ. ಬಹುಶಹ ಅಮೇರಿಕೆಯಲ್ಲಿ ಹುಗ್ಗಿ ಮಾಡಿಕೊಂಡು ತಿಂದ ಮೊಟ್ಟಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಲೇಖಕಿ ಪಾತ್ರರಾಗುತ್ತಾರೆ.

ಮಾಧ್ವ ಮನೆಗಳಲ್ಲಿನ ಆಚಾರ ವಿಚಾರಗಳು ಹಾಸುಹೊಕ್ಕಾಗಿ ಪುಸ್ತಕದಲ್ಲಿ ಅವರಣಗೊಳ್ಳುತ್ತದೆ.ಅದಕ್ಕಿಂತಲೂ ಹೆಚ್ಚಾಗಿ ನನ್ನಂಥಹವರ ಮನಸೆಳೆಯುವುದು ಅಗಾಧವಾದ ಮರೆತ ಪದಪುಂಜಗಳು. ಕುಂಚಿಗಿ, ಪರಕಾರ, ಪೋಳಿಗೆ, ಘಟಿಗೆ ಮುಂತಾದ ಪದಗಳ ಸಂಗಡ ಮಾಧ್ವ ಮತದವರಿಗೆ ಮಾತ್ರಾ ವಿಶಿಷ್ಟವಾಗಿರುವ ಹಲವಾರು ಪದಗಳು ಇಲ್ಲಿ ನಿಮಗೆ ಸಿಗುತ್ತವೆ.ನೀರಸವಾಗಿ ಬರೀ ವಿವರಣೆಗಳಿಂದ ತುಂಬಿಕೊಂಡು ಒಮ್ಮೆ ಓದಿ ಮರೆಯಬೇಕಾದ ಪುಸ್ತಕವಾಗದಿರಲು ಇಂತಹ ಅಪೂರ್ವವಾದ ಕುಸುರಿ ನೆರವಾಗುತ್ತದೆ.

ಅಮೇರಿಕೆಯಲ್ಲಿ ಇವರು ಬಟ್ಟೆ ಒಣಗಿಹಾಕಿಕೊಳ್ಳಲು ಪಟ್ಟಪಾಡು,ಮಗ ಹಿಮಪಾತದಲ್ಲಿ ಸಿಲುಕಿಕೊಂಡಿದ್ದು, ಇತ್ತ ಊರಿನಲ್ಲಿ ತಂದೆಯವರು ತೀರಿಕೊಂಡಿದ್ದು ಈ ಮೊದಲಾದ ಪ್ರಸಂಗಗಳು ಒಮ್ಮೆ ನಗು ಒಮ್ಮೆ ನೋವು ಹುಟ್ಟಿಸುವಲ್ಲಿ ಯಶಸ್ವಿಯಾಗಿದೆ.ಅಮೇರಿಕೆಯಲ್ಲಿ ವಾಸದ ನಿಯಮಾವಳಿಯನ್ನು ವಿವರಿಸುತ್ತಾ ಎರಡು ಬೆಡ್ ರೂಮಿನ ಮನೆಯಲ್ಲಿ ತಂದೆ ತಾಯಿಗಳು ಮಗನ ಸಂಸಾರದೊಂದಿಗೆ ವಾಸವಿರಬಾರದು ಎಂಬ ನಿಯಮದ ಬಗ್ಗೆ ಬರೆಯುತ್ತಾರೆ. ಮಗ ಇವರಿಗೆ ಯಾರಾದರೂ ಕೇಳಿದರೆ ನಾವು ಬೆಳಿಗ್ಗೆ ಬಂದು ಸಂಜೆಗೆ ಹೋಗಿಬಿಡುತ್ತೇವೆ, ಮಕ್ಕಳನ್ನು ನೋಡಿಕೊಳ್ಳುವವರುನಾವು ಎಂದು ಹೇಳಬೇಕು ಎಂದು ಹೇಳಿದ್ದರಂತೆ. ಅಪ್ಪ ಅಮ್ಮನನ್ನು ಆಯಾಗಳೆಂದು ಹೇಳುವ ಸುಡುಗಾಡು ಪದ್ಧತಿ ಎಲ್ಲಿಂದ ಬಂತು ಎಂದು ಇವರಿಗೆ ಬೇಸರ.

ಪುಸ್ತಕದ ಓದು ಮುಂದುವರಿಸುತ್ತಾ ಥಟ್ಟನೆ ನಮ್ಮ ನೆನಪಿಗೆ ಮಾಸ್ತಿಯವರ ಭಾವ ಆತ್ಮಕಥಾನಕ–ಕನಸಿನ ವಿವರ ಓದುವಾಗ, ತ.ಸು. ಶಾಮರಾಯರ ಮೂರು ತಲೆಮಾರು–ಲೇಖಕಿಯ ದೈವಭಕ್ತಿ ಹಾಗೂ ನಂಬಿಕೆಯನ್ನು ಓದುವಾಗ, ಬಿ ಜಿ ಎಲ್ ಸ್ವಾಮಿಯವರ ಅಮೇರಿಕದಲ್ಲಿ ನಾನು–ಅಲ್ಲಿನ ಹಬ್ಬದ ವಿವರಣೆ ಓದುವಾಗ ನುಗ್ಗುತ್ತದೆ. ಕೊನೆಯ ಪುಟಗಳಿಗೆ ಬಂದಾಗ ಅಮೇರಿಕೆಯಲ್ಲಿನ ಭಾರತೀಯರ ಭಜನೆಗಳು ಮತ್ತು ಇವರು ಒಯ್ದಿದ್ದ ರೇಷ್ಮೇ ಸೀರೆಗಳ ಸದುಪಯೋಗದ ವಿವರ ನವಿರಾದ ಭಾವವನ್ನು ಪಸರಿಸುವಲ್ಲಿ ಯಶಸ್ವಿಯಾಗಿದೆ. ಅಂದ ಹಾಗೆ ಪುಸ್ತಕದ ಹೆಸರು – ಅವನಿಯ ಅಪ್ಸರೆ ಅಮೆರಿಕ!

***

Mailing Date
5th of every month
Mailled at. Rajajinagar - PO

CPMG/KA/BGW-544/2006-2008
RNI-KAR KAN / 2005/ 15457

MALLIGE

PERSONALISED COMPLETE MEDICAL CARE



Mallige Medical Centre

31/32, Crescent Road,

Bangalore – 560001

Phone: 22203333, Fax: 22265298

E-mail: info@mallige.com

Mahabodhi Mallige Hospital

T. Mariappa Road, 1st Block, Jayanagar,

Bangalore – 560011

Phone: 26565678, Fax: 26571516

Web: http://www.mallige.com

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999.
Editor: M. SHIVAKUMAR